International Journal of Applied Research 2020; 6(2): 219-227




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2020; 6(2): 219-227
www.allresearchjournal.com
Received: 14-12-2019
Accepted: 17-01-2020

**ರಾಮಚಂದ್ರ**
ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ
ಭಂಡಾರ್‌ಕಾರ್ಸ್ ಕಾಲೇಜು –
ಕುಂದಾಪುರ, ಉಡುಪಿ ಜಿಲ್ಲೆ

**Correspondence Author:**
**ರಾಮಚಂದ್ರ**
ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ
ಭಂಡಾರ್‌ಕಾರ್ಸ್ ಕಾಲೇಜು –
ಕುಂದಾಪುರ, ಉಡುಪಿ ಜಿಲ್ಲೆ

# ುಡಕಟ್ಟು ಗುಣಲಕ್ಷಣವುಳ್ಳ ಮರಾಟಿ ಸಮುದಾಯದ ಅಧ್ಯಯನಗಳ ತಾತ್ವಿಕ ವಿವೇಚನೆ (ಕರಾವಳಿ ಕರ್ನಾಟಕದ ಕುಂಬ್ರಿ ಮರಾಠಿ, ಮರಾಟಿ, ಮರಾಟಿ ನಾಯ್ಕ, ಕುಣುಬಿ, ಕುಡುಬಿ ಸಮುದಾಯಗಳನ್ನು ಅನುಲಕ್ಷಿಸಿ)

**ರಾಮಚಂದ್ರ**

## ಪ್ರಸ್ತಾವಿಕ

ಭಾರತವು ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಬೃಹತ್ ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿದೆ. 2011ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ ಶೇಕಡಾ 8.6 ಬುಡಕಟ್ಟು ಜನಸಂಖ್ಯೆಯಿದೆ. ಬುಡಕಟ್ಟು ಜನರು ಬಂದು ರಾಷ್ಟ್ರದ ನಾಗರಿಕತೆಯ ಪ್ರಾರಂಭದಲ್ಲಿದ್ದ ಹಾಗೂ ಬಂಧುತ್ವ ಗುಂಪುಗಳಿಗೆ ಒತ್ತು ನೀಡಿ ಬೆಳೆದ ಸಂಸ್ಕೃತಿಯ ಸಮಾಜ. ಇವರನ್ನು ವಿವಿಧ ಗುಣಲಕ್ಷಣಗಳಿಗುಣವಾಗಿ ಆದಿವಾಸಿಗಳು, ಮೂಲನಿವಾಸಿಗಳು, ಬುಡಕಟ್ಟು, ಗಿರಿಜನ, ಬಂಧುತ್ವಪಂಗಡ ಎಂದೆಲ್ಲ ವ್ಯಾಖ್ಯಾನಿಸಲಾಗಿದೆ. ಬುಡಕಟ್ಟುಗಳನ್ನು ಭಾರತದ ಮುಖ್ಯವಾಹಿನಿಯ ಹಿಂದೂಗಳಿಗೆ ಹೋಲಿಸಿದಾಗ ಅವರ ಸಂಸ್ಕೃತಿ ಮತ್ತು ಆರ್ಥಿಕತೆ ಭಿನ್ನವಾಗಿ ಗೋಚರಿಸುತ್ತದೆ. ಕೆಲವೆಡೆ ಹಿಂದುಗಳಂತೆ ಕಂಡರೂ ಅವರ ವಿಶಿಷ್ಟ ಆಚರಣೆಗಳಿಂದ ಅಲ್ಲಲ್ಲಿ ಬೇರ್ಪಡುತ್ತಾರೆ. ಕರಾವಳಿ ಕರ್ನಾಟಕದಲ್ಲಿ ಕಂಡುಬರುವ ಮರಾಟಿ ಸಮುದಾಯಗಳಾದ ಮರಾಟಿ ನಾಯ್ಕ, ಮರಾಟಿ, ಕುಡುಬಿ, ಕುಣುಬಿ, ಕುಂಬ್ರಿ ಮರಾಠಿ, ಕ್ಷತ್ರಿಯ ಮರಾಠಿ, ಆರ್ಯ ಮರಾಠಿ ಹಿಂದುಗಳಂತೆ ಕಂಡು ಬಂದರೂ ಅವರ ಹಲವು ಧಾರ್ಮಿಕ ಆಚರಣೆಗಳು ವಿಶಿಷ್ಟವಾಗಿದೆ. ಪ್ರಸ್ತುತ ಲೇಖನದಲ್ಲಿ ಮರಾಟಿ ಸಮುದಾಯಗಳು ಅವುಗಳ ಬಗ್ಗೆ ಈಗಾಗಲೇ ಅಧ್ಯಯನ ಮಾಡಿರುವ ಕೃತಿಗಳ ತಾತ್ವಿಕತೆಯನ್ನು ವಿಶ್ಲೇಷಿಸಲಾಗಿದೆ.

## ಅಧ್ಯಯನದ ಉದ್ದೇಶ

1. ಈ ಅಧ್ಯಯನವನ್ನು ಕರಾವಳಿ ಕರ್ನಾಟಕ ವ್ಯಾಪ್ತಿಗೊಳಪಟ್ಟ ಮೂರು ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ವಾಸ್ತವ್ಯವಿರುವ ಮರಾಟಿ, ಮರಾಟಿ ನಾಯ್ಕ, ಕುಡುಬಿ, ಕುಣುಬಿ ಮತ್ತು ಕುಂಬ್ರಿ ಮರಾಠಿ ಸಮುದಾಯಗಳಿಗೆ ಮಾತ್ರ ಸೀಮಿತಗೊಳಿಸಲಾಗಿರುತ್ತದೆ.
2. ಮೇಲೆ ತಿಳಿಸಿದ ಮರಾಟಿ ಸಮುದಾಯಗಳಾದ ಕುರಿತು ವಸಹಾತುಶಾಹಿ ಹಾಗೂ ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ನಡೆದ ಅಧ್ಯಯನಗಳಿಗೆ ಮಾತ್ರ ಸೀಮಿತಗೊಳಿಸಿ ವಿಶ್ಲೇಷಿಸಲಾಗಿದೆ.

## ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

1. ಕರಾವಳಿ ಕರ್ನಾಟಕದ ಮೂರು ಜಿಲ್ಲೆಗಳಾದ ಉತ್ತರಕನ್ನಡ, ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಯ ಆಯ್ದ ಗ್ರಾಮಗಳಲ್ಲಿ ವಾಸ್ತವಿರುವ ಮರಾಟಿ ಸಮುದಾಯಗಳ ಕುಟುಂಬಗಳನ್ನು ಹಲವಾರು ಬಾರಿ ಬೇಟಿ ಮಾಡಿ ಮಾಹಿತಿದಾರರಿಂದ ವಿಷಯ ಸಂಗ್ರಹಿಸಲಾಗಿದೆ.
2. ಮರಾಟಿ ಸಮುದಾಯಗಳ ಬಗ್ಗೆ ಈಗಾಗಲೇ ಅಧ್ಯಯನಗಳನ್ನು ಮಾಡಿರುವ ಅನುಷಂಗಿಕ ಮಾಹಿತಿಗಳ ಮೂಲಗಳಾದ ಅಧ್ಯಯನ ಗ್ರಂಥಗಳು, ಕೃತಿಗಳು, ನಿಯತಕಾಲಿಕೆಗಳು, ವರದಿಗಳು ಗಜೆಟೀಯರ್‌ಗಳು, ಮಹಾಪ್ರಬಂಧಗಳು, ದಿನಪತ್ರಿಕೆಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಹೀಗೆ ಕ್ಷೇತ್ರಕಾರ್ಯ ಹಾಗೂ ಅನುಷಂಗಿಕ ಮಾಹಿತಿಗಳ ಮೂಲಗಳ ವಿಧಾನಗಳಿಂದ ಮಾಡಲಾಗಿದೆ. ಅಧ್ಯಯನದ ವ್ಯಾಪ್ತಿಯನ್ನು ಕರಾವಳಿ ಕರ್ನಾಟಕದ ಮೇಲಿನ ಮೂರು ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸಿದೆ.

**ಬುಡಕಟ್ಟು ಗುಣಲಕ್ಷಣವುಳ್ಳ ಮರಾಟಿ ಸಮುದಾಯಗಳು:**

ಸ್ವಾತಂತ್ರ ಪೂರ್ವಕಾಲದಿಂದ ಪ್ರಾರಂಭಿಸಿ ಇವತ್ತಿನವರೆಗೆ, ಭಾರತದಲ್ಲಿನ ಬುಡಕಟ್ಟುಗಳ ಕುರಿತು ಯುರೋಪಿನ ಕ್ರೈಸ್ತ ಮಿಶನರಿಗಳು, ಮಾನವಶಾಸ್ತ್ರಜ್ಞರು, ಸಾಹಿತಿಗಳು, ಸಮಾಜಶಾಸ್ತ್ರಜ್ಞರು, ಚಿಂತಕರು, ಸಮಾಜಸುಧಾರಕರು ಮತ್ತಿತ್ತರರು ಈ ಸಮುದಾಯವನ್ನು ಒಂದು ಅಧ್ಯಯನದ ವಸ್ತುವನ್ನಾಗಿಸಿದ್ದಾರೆ. ಇವರೆಲ್ಲರು 'ಬುಡಕಟ್ಟು' ಎಂಬ ಪದವನ್ನು ಅವರದೇಯಾದ ಶೈಲಿಯ 'ಪದ'ದೊಂದಿಗೆ ಗುರುತಿಸಿಕೊಂಡಿರುತ್ತಾರೆ.

ಸರ್. ಹರ್ಬಟ್ ರಿಸ್ಲೆಅವರು ಬುಡಕಟ್ಟು ಜನ ಸಮುದಾಯನ್ನು ಮೂಲನಿವಾಸಿಗಳು (Aboriginals) ಎಂದಿದ್ದಾರೆ (1901, ಪು. 218). ಸರ್.ಬೇನ್ಸ್ ಜನಗಣತಿ ವರದಿಯಲ್ಲಿ 'ಬೆಟ್ಟ ಮತ್ತು ಕಾಡಿನ ಬುಡಕಟ್ಟು ಎಂದು ಕರೆದರು (1891, ಪು. 158). ಡಾ. ಜೆ.ಎಚ್. ಹಟನ್‌ರವರು 'ಆದಿಮ ಬುಡಕಟ್ಟು' ಎಂಬುದಾಗಿ ಗುರುತಿಸಿದ್ದಾರೆ (1931: 391). ಠಕ್ಕರ್‌ಬಾಪರವರು 'ಆದಿಪ್ರಜಾ' (2014: 267) ಡಾ.ಜಿ.ಎಸ್. ಗುರ್ಯೆ (1943: 21) ಅವರು 'ಹಿಂದುಳಿದ ಹಿಂದು'ಗಳು ಎಂಬುದಾಗಿ ಕರೆದಿರುವರು. ಡಾ. ವೇರಿಯರ್ ಎಲ್ವಿನ್‌ರವರು 'ರಾಷ್ಟ್ರದ ಮೂಲ ವಾರೀಸುದಾರರು' ಎಂಬುದಾಗಿ ಗುರುತಿಸಿದ್ದಾರೆ (1939: 519). 1901, 1911, 1921, 1931 ಮತ್ತು 1941ರ ಜನಗಣತಿಯ ವರದಿಗಳಲ್ಲಿ ಬುಡಕಟ್ಟು ಜನರನ್ನು ಕ್ರಮವಾಗಿ 'ಸರ್ವಚೇತನವಾದಿಗಳು (ಂಟುಟ್ಟುಣ) ಬುಡಕಟ್ಟುಸರ್ವಚೇತನವಾದಿಗಳು (Tribal Animist) 'ಬೆಟ್ಟ ಮತ್ತು ಕಾಡಿನ ಬುಡಕಟ್ಟುಗಳು' (ಊಟಟ ಚಿಟಿಜ ಈಂಡಿಜ್ಞಣ ಣಡುಥಭಜ) ಪ್ರಾಚೀನ ಬುಡಕಟ್ಟುಗಳು (Ancient tribes) ಮತ್ತು 'ಬುಡಕಟ್ಟುಗಳು' ಎಂದು ಕರೆಯಲಾಗಿದೆ. ಡಾ.ಆರ್.ಕೆ. ದಾಸ್ ಮತ್ತು ದಾಸ್ ಎಸ್.ಆರ್. ರವರು ಬುಡಕಟ್ಟು ಜನರನ್ನು 'Submerged humanity' ಎಂಬುದಾಗಿ ಮರು ನಾಮಕರಣಗೊಳಿಸಿರುವರು (1955: 29). ಗುಜರಾತ್‌ನ ಸಂತ ನರಸಿಂಹ ಮೇಹ್ತ ಅವರು 'ಗಿರಿಜನ' ಎಂಬುದಾಗಿ, ಮುಂದಕ್ಕೆ 'ಗಿರಿಜನ' ಪದವನ್ನು ಪೂಜ್ಯ ಗಾಂಧಿಜೀಯವರು ಸ್ವಾತಂತ್ರ ಹೋರಾಟದ ಕಾಲದಲ್ಲಿ ಪ್ರಚರ ಪಡಿಸಿದರು. ಒಂದು ನಿರ್ದಿಷ್ಟ ಭಾಷೆಯನ್ನು ಮಾತನಾಡುವ ಮತ್ತು ಸಾಮಾನ್ಯ ಜೀವನ ಪದ್ಧತಿಯನ್ನು ಹೊಂದಿಕೊಂಡು ಒಂದೇ ಪ್ರದೇಶದಲ್ಲಿ ವಾಸಿಸುವ ಸ್ಥಳಕ ಸಮುದಾಯಗಳ ಸಮೂಹವನ್ನು ಬುಡಕಟ್ಟು ಎಂದು ಕರೆಯಬಹುದಾಗಿದೆ. ಇಂಪೀರಿಯಲ್ ಗೆಝೆಟಿಯರ್ ನೀಡುವ ವಿವರಣೆಯಂತೆ "ಒಂದೇ ನಿರ್ದಿಷ್ಟ ಪ್ರದೇಶದಲ್ಲಿ ಅನೇಕ ಕುಟುಂಬಗಳು ಒಟ್ಟಾಗಿ ಜೀವಿಸುತ್ತಿದ್ದ ಸಾಮಾನ್ಯವಾಗಿ ಒಂದೇ ಭಾಷೆಯನ್ನಾಡುವ ಮತ್ತು ಹೊರ ಬಾಂಧವ್ಯದ ಜನರ ಸಮುದಾಯವನ್ನು" ಬುಡಕಟ್ಟು ಸಮೂಹ ಎಂದು ಕರೆಯಬಹುದಾಗಿದೆ.

ಪರಿಶಿಷ್ಟ ಪಂಗಡ ಅಥವಾ ಬುಡಕಟ್ಟು ಎಂದು ಘೋಷಿಸಲು ಕೆಲವು ಗುಣಲಕ್ಷಣಗಳನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ. ಭಾರತದಲ್ಲಿ ಆದಿಮ ಸಮುದಾಯಗಳನ್ನು ಪರಿಶಿಷ್ಟ ಪಂಗಡಗಳೆಂದು ಪರಿಗಣಿಸಲು 1953ರ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳ ಆಯೋಗವು ಈ ಕೆಳಗಿನ ಲಕ್ಷಣಗಳನ್ನು ಪಟ್ಟಿ ಮಾಡಿದೆ.

1. ನಾಗರಿಕ ಸಮುದಾಯದಿಂದ ದೂರವಿದ್ದು ಕಾಡು, ಬೆಟ್ಟ, ಪರ್ವತ ಅಥವಾ ಪರ್ವತದ ಅಂಚಿನಲ್ಲಿ ಬದುಕುವವರು.
2. ನಿಗ್ರೋಯಿಡ್, ಅಸ್ಟ್ರೋಲಾಯಿಡ್, ಮಂಗೋಲಾಯಿಡ್ ಮತ್ತು ಕೊಕೊಸೈಡ್ ಈ ನಾಲ್ಕು ಜನಾಂಗದಲ್ಲಿ ಯಾವುದಾದರು ಒಂದಕ್ಕೆ ಸೇರಿದಬೇಕು.
3. ಬುಡಕಟ್ಟು ಪ್ರತ್ಯೇಕ ಭಾಷೆಯನ್ನು ಹೊಂದಿರಬೇಕು.
4. ಪಿತೃಪೂಜೆ, ದೈವಗಳ ಆರಾಧನೆಯನ್ನು ಮಾಡುವ ಪ್ರಾಚೀನ ಆಚರಣೆಯನ್ನು ಹೊಂದಿರಬೇಕು.
5. ಪ್ರಾಚೀನ ಕಸುಬುಗಳಾದ ಬೇಟೆ, ಬೇಸಾಯ, ಕುಮೇರಿ ಕೃಷಿ ಮತ್ತು ಕಾಡುತ್ಪತ್ತಿಗಳನ್ನು ಸಂಗ್ರಹಿಸಿ ಜೀವನ ನಿರ್ವಹಿಸುವವರಾಗಿರಬೇಕು.
6. ಮಾಂಸವನ್ನು ಸೇವನೆಯನ್ನು ಮಾಡುವವರಾಗಿರಬೇಕು.

ಈ ಮೇಲಿನ ಅಂಶಗಳ ಆಧಾರದಲ್ಲಿ ಬುಡಕಟ್ಟು ಅಥವಾ ಆದಿವಾಸಿ ಸಮುದಾಯಗಳ ಬದುಕಿಗೆ ಪೂರಕವಾದ ವಾತಾವರಣ ಇದ್ದಾಗಿದೆ. ಅಧ್ಯಯನದ ವ್ಯಾಪ್ತಿಯೊಳಪಟ್ಟ ಕರಾವಳಿ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ವೈವಿಧ್ಯಮಯ ಬುಡಕಟ್ಟು ಸಮುದಾಯಗಳನ್ನು ಗಮನಿಸಬಹುದಾಗಿದೆ. ದುರಂತವೆಂದರೆ ಬುಡಕಟ್ಟುಗಳ ಎಲ್ಲಾ ಗುಣಲಕ್ಷಣ ಹೊಂದಿದ್ದರೂ ಸಹ ಕುಣಬಿ, ಕುಂಬ್ರಿ ಮರಾಠಿ, ಮರಾಟಿ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಾಸ್ತವ್ಯವಿರುವ ಕುಡುಬಿ ಸಮುದಾಯಗಳನ್ನು ಬುಡಕಟ್ಟು ಸಮುದಾಯ ವರ್ಗಕ್ಕೆ ಸೇರಿಸಲಾಗಿಲ್ಲ. ಮರಾಟಿ ನಾಯ್ಕ ಸಮುದಾಯದವರು ಮಾತ್ರ ಪರಿಶಿಷ್ಟ ಪಂಗಡದ ಸೌಲಭ್ಯಗಳನ್ನು ಕೆಲವೊಂದು ಇತಿಮಿತಿಗಳಲ್ಲಿ ಪಡೆದುಕೊಂಡಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿರುತ್ತದೆ.

ಕರಾವಳಿ ಕರ್ನಾಟಕದಲ್ಲಿ ಹಲವಾರು ಬುಡಕಟ್ಟು ಹಿಂದೂ ಜಾತಿಗಳೊಂದಿಗೆ ಬೆರೆಯದೆ ಬಹಳ ಕಾಲ ಸ್ವತಂತ್ರವಾಗಿದ್ದು, ತಮ್ಮ ಪ್ರತ್ಯೇಕತೆಯ ಮೂಲಕ ತಮ್ಮದೇ ವಿಶಿಷ್ಟವಾದ ಸಂಸ್ಕೃತಿಯನ್ನು ಉಳಿಸಿಕೊಂಡು ವೈದಿಕರ ನೆರಳು ಸಹ ಈ ಸಮಾಜದ ಮೇಲೆ ಬೀಳಲಿಲ್ಲ. ಕೆಲವೊಂದು ಸಂದರ್ಭದಲ್ಲಿ ಹಿಂದೂ ಜಾತಿಯೊಂದಿಗೆ ಭಾಗವಹಿಸಿದರೂ ತಮ್ಮ ಪರಂಪರೆ ಸಂಪ್ರದಾಯ, ಜೀವನಕ್ರಮಗಳನ್ನು ಉಳಿಸಿಕೊಂಡಿರುತ್ತಾರೆ. ಆದರೆ ಇತ್ತೀಚಿಗೆ ಕೆಲವೊಂದು ಬುಡಕಟ್ಟು ಸಮುದಾಯಗಳು ನಿಧಾನವಾಗಿ ಜಾತಿ ಸಮಾಜವಾಗಿ ಪರಿವರ್ತನೆಗೊಳ್ಳುತ್ತಿದೆ. ಇಲ್ಲಿ ನಿರ್ಮಲ್ ಕುಮಾರ್ ಬೋಸ್ ಅವರ ಅಭಿಪ್ರಾಯವನ್ನು ಉಲ್ಲೇಖಿಸಬೇಕಾಗುತ್ತದೆ. 'ಎಲ್ಲಿಯವರೆಗೆ ಬುಡಕಟ್ಟು ಸಮುದಾಯವು ತಮ್ಮ ಹುಟ್ಟು-ವಿವಾಹ-ಸಾವು ಇವುಗಳಿಗೆ ಬ್ರಾಹ್ಮಣ ಪುರೋಹಿತರಿಗೆ ಅವಕಾಶ ಮಾಡಿಕೊಡುವುದೋ ಆಗ ಬುಡಕಟ್ಟು ಸಮುದಾಯವು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಜಾತಿಯಾಗಿ ಬದಲಾವಣೆಯಾಗುತ್ತದೆ.' **ಧೀರೇಂದ್ರನಾಥ ಮುಜುಂದಾರ್**ರವರು ಭಾರತದಲ್ಲಿ ಪರಿವರ್ತನೆಗೆ ಒಳಗಾಗಿರುವ ಬುಡಕಟ್ಟುಗಳನ್ನು ಮೂರು ಹಂತದಲ್ಲಿ ಗುರುತಿಸಿದ್ದಾರೆ.

- ಜಾತಿಗಳಾಗಿ ಸಂಪೂರ್ಣ ಪರಿವರ್ತಿತವಾಗಿರುವ ಬುಡಕಟ್ಟುಗಳು
- ಹಿಂದುಗಳೊಡನೆ ಭಾಗವಹಿಸಿಯೂ ತಮ್ಮ ಸಂಪ್ರದಾಯಗಳನ್ನೂ, ನಂಬಿಕೆಗಳನ್ನೂ ಉಳಿಸಿಕೊಂಡ ಬುಡಕಟ್ಟುಗಳು
- ಹಿಂದೂಧರ್ಮದ ಪ್ರಭಾವಕ್ಕೆ ಒಳಗಾಗದೆ, ಆ ಧರ್ಮದ ದಬ್ಬಾಳಿಕೆಯನ್ನು ಸಹಿಸದೆ ತಮ್ಮ ಸ್ವಾತಂತ್ರ್ಯಕ್ಕಾಗಿ ಪ್ರತ್ಯೇಕವಾಗಿ ಹೋರಾಡುತ್ತಿರುವ ಬುಡಕಟ್ಟುಗಳು.

**ಅ) ಕುಂಬ್ರಿ ಮರಾಠಿ**

ಕುಂಬ್ರಿ ಮರಾಠಿ ಸಮುದಾಯದವರು ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ, ಶಿರಸಿ, ಕುಮಟಾ, ಅಂಕೋಲಾ, ಸಿದ್ದಾಪುರ, ಹೊನ್ನಾವರ ಹಾಗೂ ಭಟ್ಕಳ ತಾಲೂಕುಗಳಲ್ಲಿ ಸಾಂದ್ರವಾಗಿ ಕಂಡುಬರುತ್ತಾರೆ. ಇವರು ಪಶ್ಚಿಮಘಟ್ಟಗಳ ಕಡಿದಾದ ಕಣಿವೆ ಪ್ರದೇಶಗಳಲ್ಲಿ ಚದುರಿದಂತೆ ವಾಸವಾಗಿದ್ದು, ಆರಂಭಕಾಲದಲ್ಲಿ ಕುಮೇರಿ ಕೃಷಿ ಪದ್ಧತಿಯನ್ನು ಅನುಸರಿಸುತ್ತಾ ಇತ್ತೀಚೆಗೆ ಒಂದೊಂದು ಕಡೆ ನೆಲೆನಿಂತಿರುವಂತೆ ಕಂಡುಬರುತ್ತದೆ.

ಕುಂಬ್ರಿ ಮರಾಠಿಗರು, ಶಿರಸಿ, ಸಿದ್ಧಾಪುರ, ಕುಮಟಿ, ಹೊನ್ನಾವರ, ಭಟ್ಕಳ, ಯಲ್ಲಾಪುರದ ದಕ್ಷಿಣಭಾಗ, ಅಂಕೋಲಾ ತಾಲೂಕಿನ ಪೂರ್ವ ಭಾಗಗಳಲ್ಲಿ ನೆಲೆ ನಿಂತಿರುವುದ್ದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗುರುತಿಸಲಾಗಿದೆ. ಯಲ್ಲಾಪುರ ತಾಲೂಕಿನ ಕೆಳಾಸೆ, ಇಳೆಹಳ್ಳಿ, ಹೆಮ್ಮಾಡಿ, ಕೊಡ್ಲಗದ್ದೆ, ಅರೆಬೈಲು, ಸುಂಕನಾಳ, ಮಂಚಿಕೇರಿ, ಕೋಟೆಮನೆ, ಕೊಂಡೆಮನೆ, ಕನ್ನಡಗಲ್ಲು, ಬೆಳಗೇರಿ, ಚಿಪಗೇರಿ ಕಡೆಗಳಲ್ಲಿ ಶಿರಸಿ ತಾಲೂಕಿನ ಬೆಡನಗಾಂ, ಎಕ್ಕೆಂಬಿ, ಬಿಸಲಕೊಪ್ಪ, ಮಳಗಿ, ಸೋಂದಾ, ಸಾಲ್ಕಣಿ, ವಾಜಗದ್ದೆ, ಜಡ್ಡಿಗದ್ದೆ, ದೇವನಹಳ್ಳಿ, ಬೆಣಂಗಾವ್, ಮೇಲಕೊಪ್ಪಲು, ಮತ್ತಿಘಟ್ಟಾ, ಸವಲೆ, ಬರಸಗುಣೆ, ಕಲ್ಲಳ್ಳಿ, ಮುಂಡಗಾರುಗಳಲ್ಲಿ, ಸಿದ್ಧಾಪುರ ತಾಲೂಕಿನ ನಿಲಕುಂದ, ಬಿರಲಮಕ್ಕಿ, ಕೋಚಿಗದ್ದೆ, ಹೆಗ್ಗರಣೆ, ಹಳ್ಳಿಬೈಲು, ಮಂದಾನೆಗಳಲ್ಲಿ, ಕುಮಟಾ ತಾಲೂಕಿನ ಬಂಗಾಣೆ, ಮೊರಸ, ಕವಲೋಡಿ, ಸಾಂತಗಲ್, ಉಳ್ಳೂರು ಮಠ, ಮೊಸಿಮನೆ, ನಾಗೂರು ಬಂಡಗಾರ, ಯೋಣ, ಹಳ್ಳಿಬೈಲುಗಳಲ್ಲಿ, ಹೊನ್ನಾವರ ತಾಲೂಕಿನ ಮಂಕಿ ಗೇರುಸೊಪ್ಪ, ಅಡಿಕೆಕುಳಿ, ಸಂಪೊಳ್ಳಿ ಹಡಿನಬಾಳಗಳಲ್ಲಿ, ಭಟ್ಕಳದ ಹಡಿಲು, ಹೆಂಜಲೆ ಕಟಗಾರ ಕೊಪ್ಪಗಳಲ್ಲಿ ವಾಸ್ತವ್ಯ ನೆಲೆಗಳನ್ನು ಇವರನ್ನು ಗುರುತಿಸಲಾಗಿದೆ.

ಕುಂಬ್ರಿ ಮರಾಠಿಗರು ಅಲೆಮಾರಿ ಪಶುಪಾಲಕರು ಮತ್ತು ಕುಮ್ರಿ ಬೇಸಾಯ ಪದ್ಧತಿಯನ್ನು ರೂಢಿಸಿಕೊಂಡು ಬಂದಿರುವ ವಲಸಿಗ ಸಮುದಾಯಕ್ಕೆ ಸೇರಿದವರು. 'ಕುಂಬ್ರಿ' ಎಂಬ ಪದವು 'ಕುಮ್ರಿ' ಎಂಬ ಪದದ ಸ್ಥಳೀಯ ಬಳಕೆಯ ರೂಪವಾಗಿದೆ. 'ಕುಮ್ರಿ' ಬೇಸಾಯ ಮಾಡುತ್ತಾ ಉತ್ತರಕನ್ನಡದ ಇಳಿಜಾರು ಕಣಿವೆಗಳಲ್ಲಿ ವಾಸಿಸುವ ಈ ಸಮುದಾಯ ಇಂದಿಗೂ ಜಿಲ್ಲೆಯ ಹಲವೆಡೆ ಕುಮ್ರಿ ಬೇಸಾಯ ಕ್ರಮವನ್ನು ಅನುಸರಿಸಿರುತ್ತಾರೆ. ಜನಾಂಗಿಕವಾಗಿ ಇವರಿಗೆ ಸಂಬಂಧಿಸಿರುವ ಬೇಸಾಯವನ್ನು ಇತರ ಸಮುದಾಯಗಳಾದ ಕುಣುಬಿ, ಕುಡುಬಿ, ಮರಾಟಿ, ಮರಾಠಿ, ಆರ್ಯ ಮರಾಠಿ, ಕ್ಷತ್ರಿಯ ಮರಾಠಿ, ಮರಾಟಿನಾಯ್ಕ ಸಮುದಾಯದವರು ಸಹ ಕುಮ್ರಿ ಬೇಸಾಯಗಾರರಾಗಿರುವರು. ಈ ಸಮುದಾಯ ಕುಮ್ರಿ ಬೇಸಾಯ ಅನುಸರಿಸಿಕೊಂಡು ಬಂದ ಕಾರಣಕ್ಕೆ 'ಕುಮ್ರಿ ಮರಾಠಿ'ಗರು ಅಥವಾ 'ಕುಂಬ್ರಿ ಮರಾಠಿ'ಗರು ಎಂದು ಕರೆಯಲಾಗಿರುತ್ತದೆ. ಇವರು ಮೂಲತಃ ಸೈನಿಕ ಸಮುದಾಯ ಎಂಬುದಾಗಿ ಚರಿತ್ರೆಕಾರರು ಕರೆದಿದ್ದಾರೆ. ಅಲ್ಲದೆ, ಶಿವಾಜಿ ಸೈನ್ಯದಲ್ಲಿ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಶಿವಾಜಿಯು ಕರ್ನಾಟಕದ ಗಡಿ ಪ್ರದೇಶದಲ್ಲಿ ತನ್ನ ರಾಜ್ಯ ವಿಸ್ತರಿಸುವ ಭಾಗವಾಗಿ ಈ ಸಮುದಾಯಗಳನ್ನು ಇಲ್ಲಿಗೆ ಪದೇ ಪದೇ ಮುನ್ನಡಿಸಿರಬಹುದೆಂದು ಅನೇಕ ಚರಿತ್ರೆಕಾರರು ಊಹಿಸಿರುತ್ತಾರೆ.

ಈ ಸಮುದಾಯದ ಜನಸಂಖ್ಯೆಯ ಕುರಿತು ನಿಖರವಾದ ಮಾಹಿತಿಗಳಿಲ್ಲ. 2011ರ ಜನಗಣತಿಯಲ್ಲಿಯೇ ಸಹ ಕುಂಬ್ರಿ ಮರಾಠಿಗರ ಕುರಿತು ನಿಖರವಾದ ಹಾಗೂ ಪ್ರತ್ಯೇಕವಾದ ಅಂಕಿಅಂಶಗಳು ಲಭ್ಯವಿಲ್ಲ. ಆದರೆ ಸಮುದಾಯದ ಹಿರಿಯರು, ಜನಪ್ರತಿನಿಧಿಗಳು ಸಭೆ ಸೇರಿ ಜಿಲ್ಲಾ ಮಟ್ಟದಲ್ಲಿ ಕುಂಬ್ರಿ ಮರಾಠಿ ಅಭಿವೃದ್ಧಿ ಸಂಘವನ್ನು ರಚಿಸಿಕೊಂಡು ಮಾಹಿತಿ ಸಂಗ್ರಹಿಸಿದ್ದು, ಉತ್ತರಕನ್ನಡ ಜಿಲ್ಲೆಯಲ್ಲಿ ಸುಮಾರು 15000 ರಿಂದ 16000 ಜನರು ಇರುವ ಬಗ್ಗೆ ಹೇಳಲಾಗುತ್ತಿದೆ.

ಇವರು ಹೆಚ್ಚಾಗಿ ವಾಸಿಸುವ ಪ್ರದೇಶಗಳಿಗೆ 'ಕೊಪ್ಪ' ಎಂದು ಕರೆಯುತ್ತಾರೆ. ಅಲ್ಲದೆ ಇವರು ಬೇರೆ ಬೇರೆ ಪ್ರದೇಶಗಳಿಗೆ 'ಕೊಪ್ಪ' ಎಂದು ಕರೆದರೆ ಕುಂಬ್ರಿ ಮರಾಠಿಗರ ಹಳ್ಳಿ ಎಂದರ್ಥ. ಒಂದೇ ಕಡೆ ಗುಂಪು ಗುಂಪಾಗಿರುವ ಇವರ ಸಮುದಾಯದ ಮುಖಂಡವನ್ನು 'ಗೌಡ' ಎಂದು ಕರೆಯುವ ವಾಡಿಕೆ ಇದೆ. ಸಮುದಾಯದಲ್ಲಿ ಉಂಟಾಗುವ ನ್ಯಾಯ ವ್ಯವಸ್ಥೆ, ಊರವರೆಲ್ಲರೂ ಕೂಡ ಕೈಗೊಳ್ಳುವ ಚಟುವಟಿಕೆಗಳು, ಹೊಂದಾಣಿಕೆ ಸಹಬಾಳ್ವೆಯೂ ಸೇರಿದಂತೆ ಸಹಜ ಹಾಗೂ ಸರಳ ಜೀವನ ನಿರ್ವಹಣೆಗೆ ಈ 'ಗೌಡ' ಸಲಹೆ ಮಾರ್ಗದರ್ಶನ ನೀಡುತ್ತಾನೆ. ಸಮುದಾಯದ ಆಚಾರ – ವಿಚಾರ, ಸಂಪ್ರದಾಯಗಳನ್ನು ಮೀರಿದರೆ ಶಿಕ್ಷೆ ವಿಧಿಸುವ ಪದ್ಧತಿಯೂ ಚಾಲ್ತಿಯಲ್ಲಿದೆ.

ಕುಂಬ್ರಿ ಮರಾಠಿಗರು ಶ್ರಮ ಜೀವಿಗಳು, ಕೃಷಿ ಹಾಗೂ ಅರಣ್ಯೋತ್ಪನ್ನಗಳ ಮೇಲೆಯೇ ಅವಲಂಬಿತರಾಗಿರುವರು. ಇವರು ಸ್ಥಳಾಂತರ ಬೇಸಾಯ ಪದ್ಧತಿಯನ್ನು ರೂಢಿಸಿಕೊಂಡು ಆಹಾರ ಹಾಗೂ ರಕ್ಷಣೆಗಾಗಿ ಕರಾವಳಿ ರಾಜ್ಯಗಳಿಗೆ ವಲಸೆ ಬಂದಿರುವುದ್ದಾಗಿದೆ. ಅವರ ಉಡುಗೆ – ತೊಡುಗೆ, ಆಹಾರ, ಭಾಷೆ ಹಾಗೂ ಕುಲ (ಬಳಿ) ಪದ್ಧತಿ, ಒಳಾಡಳಿತ, ರೂಢಿ–ಸಂಪ್ರದಾಯಗಳು, ಪ್ರಕೃತಿ ಆರಾಧನೆ, ಕುಲಲಾಂಛನ, ಶಕ್ತಿಯಾರಾಧನೆ, ಗಡಿಹಬ್ಬ, ಭೂಮಿ ಹುಣ್ಣಿಮೆ, ಸುಗ್ಗಿ, ಹೊಸಕ್ಕಿ ಹಬ್ಬ, ಕಣಹಬ್ಬ, ಮುಷ್ಟಿ, ಮಾಸ್ತಿ ಆರಾಧನೆ, ಕುಲೆ / ಪ್ರೇತಾರಾಧನೆ ಮುಂತಾದುಗಳಲ್ಲಿ ಕೃಷಿಗೆ ಅವಲಂಬಿತ ಹಬ್ಬಗಳನ್ನು ಭಯ ಭಕ್ತಿಯಿಂದ ಆರಾಧಿಸಿಕೊಂಡು ಬಂದಿರುವವರಾಗಿರುತ್ತಾರೆ.

ಕುಂಬ್ರಿ ಮರಾಠಿಗರು ಆರಂಭದಲ್ಲಿ ಸ್ಥಳಾಂತರ ಬೇಸಾಯವನ್ನು ಅವಲಂಬಿಸಿದ ಇವರು ಬರುಬರುತ್ತಾ ಒಂದೆಡೆ ನೆಲೆ ನಿಂತು ಕೃಷಿ ಚಟುವಟಿಕೆ ಕೈಗೊಂಡು ಬರುತ್ತಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿರುವೆನು. ಆಧುನಿಕತೆ ಹಾಗೂ ನಾಗರಿಕತೆಯ ಪರಿಣಾಮವಾಗಿ ಕೃಷಿಯನ್ನು ಹೊರತುಪಡಿಸಿ ಇತರ ಕಸುಬುಗಳಲ್ಲಿ ತೊಡಗಿಸಿಕೊಂಡಿರುವುದನ್ನು ಕೂಡ ಗಮನಿಸಲಾಯಿತು. ಅರಣ್ಯೋತ್ಪಾದನೆಗಳನ್ನು ಸಂಗ್ರಹಿಸಿ ಮಧ್ಯವರ್ತಿಯವರಿಗೆ ಮಾರಾಟ ಮಾಡಿ, ಉಳಿದ ಹಣದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಖರೀದಿಸಿ ಜೀವನ ನಿರ್ವಹಿಸುತ್ತಿದ್ದಾರೆ.

ಕುಂಬ್ರಿ ಮರಾಠಿಗರು ಮೂಲತಃ ಶೈವ ಪಂಥದವರಾಗಿಬೇಕೆಂದೂ ಇವರು ಪೂಜೆಸುವ 'ಮಹಾದೇವ' ಮತ್ತು ಕುರ್ಮಿನಾಥ ಅಥವಾ 'ಕಲ್ಮರಾಜ್' ಮುಂತಾದ ದೇವರನ್ನು ಆರಾಧಿಸುತ್ತಾರೆ.

**ಆ) ಮರಾಟಿನಾಯ್ಕ**

ದಕ್ಷಿಣಕನ್ನಡ, ಉಡುಪಿ, ಕೇರಳರಾಜ್ಯದ ಕಾಸರಗೋಡು ಜಿಲ್ಲೆಯಲ್ಲಿ ಮರಾಟಿಗರೆಲ್ಲರು ನಾಯ್ಕ / ನ್ಯಾಕ ಎಂಬ ಕುಲನಾಮವನ್ನು ಹೊಂದಿದ್ದಾರೆ. ನಾಯ್ಕ/ನಾಯಕ ಎಂಬ ಅಂಕಿತದಿಂದ ಅಂತ್ಯಗೊಳ್ಳುವ ಹೆಸರುಳ್ಳವರೆಲ್ಲಾ ಮರಾಟಿಗರಲ್ಲ. ಈ ನಾಮ ಜಿಲ್ಲೆಯ ಇತರ ಸಮುದಾಯಗಳಾದ ಗೌಡ ಸಾರಸ್ವತ, ಬಂಟ, ಬಿಲ್ಲವ, ರಾಮಕ್ಷತ್ರಿಯ, ಪರಿವಾರ ಬಂಟ, ಖಾರ್ವಿ, ಗಾಳದ ಕೊಂಕಣಿ, ಸಮಗಾರ, ಮಲೆನಾಡಿನಒಕ್ಕಲಿಗ, ಬಯಲು ಸೀಮೆಯ ಲಂಬಾಣಿ, ಬೇಡ, ವಾಲ್ಮೀಕ, ಈಡಿಗ, ಇನ್ನೂ ಅನೇಕ

ಸಮುದಾಯಗಳಲ್ಲಿದೆ. ವಾಸ್ತವವಾಗಿ ನಾಯ್ಕ (ನಾಯಕ) ಎಂಬುದು ಗ್ರಾಮದ ಮುಖಂಡನಿಗಿರುವ ಹೆಸರು. ಸೈನಿಕ ವ್ಯವಸ್ಥೆಯಲ್ಲಿ ಜವಾಬ್ದಾರಿಯುತ ಒಂದು ನಿರ್ದಿಷ್ಟ ಹುದ್ದೆ ಅಲ್ಲದೆ. 'ನಾಯಕ' ಎಂಬುದು ಸಂಸ್ಕೃತ ಮೂಲಕ ಪದವಾಗಿದ್ದು.

ಮರಾಟಿಗರು ಮೂಲತಃ ಇಂದಿನ ಮಹಾರಾಷ್ಟ್ರ ರಾಜ್ಯದಿಂದ ಬಂದವರು. ಮರಾಠಿಯ ಉಪಭಾಷೆಯಾದರನ್ನು ಮಾತನಾಡುವುದರಿಂದ 'ಮಹಾರಾಷ್ಟ್ರ' ಮೂಲ ಎಂದು ಹೇಳಿದರೆ ತಪ್ಪಾಗಲಾರದು. ಶಿವಾಜಿಯ ಅಥವಾ ಪೇಶ್ವೆಗಳ ಸೈನಿಕರಾಗಿಯೂ ಇರಲು ಸಾಧ್ಯವಿದೆ. ಸೇವಾದಳದಲ್ಲಿ ನಾಯ್ಕ (ನಾಯಕ್) ಎನ್ನುವ ಹುದ್ದೆಯಲ್ಲಿ ಮರಾಟಿಗರ ಪೂರ್ವಜರು ಸೇವೆ ಮಾಡುತ್ತಿದ್ದುದರಿಂದ ರೂಢಿಗತವಾಗಿ 'ನಾಯಕರು' ಎಂಬ ಪದ ಹೆಸರಲ್ಲಿ ಸೇರಿರಲು ಸಾಧ್ಯವಿದೆ. ವಲಸೆ ಬಂದ ಕಾಲದಲ್ಲಿ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ತುಳುವರು ಮರಾಟಿಗರ ಮೂಲ ಇತಿಹಾಸ ತಿಳಿದು 'ಮರಾಟಿ ನಾಯ್ಕರು' ಎಂಬ ನಾಮಪದದಿಂದ ಕರೆಯಲು ಸಾಧ್ಯವಿದೆ. ಇವರ ಹೆಸರಿನ ಮುಂದೆ ನಾಯ್ಕ (ನ್ಯಾಕ) ಎಂಬ ಕುಲನಾಮವಿದ್ದು ಅವರನ್ನು 'ಮರಾಟಿ ನಾಯ್ಕ' ಎಂಬ ಜಾತಿ ಸೂಚಕ ಪದವನ್ನು ಬಳಸುತ್ತಾ ಬರಲಾಗಿದೆ. (ಮರಾಟಿಗರನ್ನು 1956ರ ಮೈಸೂರು ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆದೇಶಿತ ಪಟ್ಟಿಯ ಖಖಖ ಭಾಗ ಗಿಖಖಖ ಕ್ರಮಸಂಖ್ಯೆ 6 ಮತ್ತು 7 (4) ಪ್ರಕಾರ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲಾಗಿದೆ.)

ಭಾರತದ ಇತರ ಬುಡಕಟ್ಟು ಜನಾಂಗಗಳಂತೆ ಮರಾಟಿ ನಾಯ್ಕರು ಹಳ್ಳಿಗಳಲ್ಲಿ ತಮ್ಮದೇ ಆದ ವಾಸ್ತವ್ಯಗಳನ್ನು ಹೊಂದಿದ್ದು ಒಟ್ಟಾಗಿ ಒಂದೇ ಕಡೆ ವಾಸಿಸುತ್ತಿದ್ದಾರೆ. ಇವರು ಕೊಂಕಣಿ ಮರಾಠಿ ಮಿಶ್ರಿತ ಆಡುಭಾಷೆ ಮಾತನಾಡುತ್ತಾರೆ. ವಿಭಿನ್ನ ನಂಬಿಕೆ ಮತ್ತು ಆಹಾರ ನಿಷೇಧಗಳಿಂದಾಗಿ ಇವರು ಮಾಂಸಹಾರಿಗಳಾಗಿದ್ದಾರೆ.

ಪಿತೃಪ್ರಧಾನ ಅವಿಭಕ್ತ (Patriarchal Joint family) ಮತ್ತು ವಿಸ್ತರಿತ ಕುಟುಂಬ (ಇಥಣಜಟಿಜ ಈಚಿಟಿುಟಥಿ) ಗಳು ಮರಾಟಿ ನಾಯ್ಕರಲ್ಲಿ ಕಾಣುವ ಮುಖ್ಯ ಕುಟುಂಬದ ಪ್ರಕಾರಗಳಾದರೂ ಅವುಗಳು ಇಂದು ಸಣ್ಣ ಅಣು ಕುಟುಂಬಗಳಾಗಿ (Nuclear Family) ಬದಲಾವಣೆಗೊಳ್ಳುತ್ತಿದೆ. ಇವರಲ್ಲಿ ಇಂದಿಗೂ ಅನೇಕ ಪ್ರಾಚೀನ ಹೆಸರುಗಳನ್ನು ಕಾಣಬಹುದು. ಗಂಡಸರಲ್ಲಿ ನಾಯ್ಕ ಹಾಗೂ ಹೆಂಗಸರಲ್ಲಿ 'ಬಾಯಿ' ಎಂಬ ನಾಮಪದದಿಂದ ಕೂಡಿಕೊಂಡಿರುತ್ತದೆ. ಇವರಲ್ಲಿ ಹಲವಾರು 'ಬಳಿ' ಕುಲಗಳಿದ್ದು, ವಿವಾಹವು ಬಳಿಯ ಹೊರಗೆ ನಡೆಯುತ್ತದೆ. ಮರಾಟಿ ನಾಯ್ಕರಲ್ಲಿ 96 ಬಳಿಗಳಿವೆ ಎಂಬ ನಂಬಿಕೆಯಿದೆ. ಎಲ್ಲಾ ಬುಡಕಟ್ಟು ಜನಾಂಗಗಳಲ್ಲಿ ಇರುವಂತೆ ಕುಲ ಲಾಂಛನದ (Totemism) ಲಕ್ಷಣಗಳು ಹೊಂದಿರುತ್ತದೆ.

ಮರಾಟಿ ನಾಯ್ಕರ ವಿವಾಹ ಪದ್ಧತಿ ಪ್ರಸ್ತುತ ಹಿಂದೂ ಸಂಪ್ರದಾಯ ರೀತಿಯಲ್ಲೇ ನಡೆಯುತ್ತಿದ್ದಾದರೂ ಅನೇಕ ಪ್ರಾಚೀನ ಬುಡಕಟ್ಟು ಸಂಸ್ಕಾರಗಳು, ವಿಧಿ ವಿಧಾನಗಳು, ರೂಢಿಗಳು, ಸಂಪ್ರದಾಯ ನಂಬಿಕೆಗಳನ್ನು ನಾವು ಕಾಣಬಹುದು. ಇವರಲ್ಲಿ 'ತೆರ' ಎಂದು ಕರೆಯುವ ವಧುದಕ್ಷಿಣೆ ಪದ್ಧತಿಯನ್ನು ಅನುಸರಿಸುತ್ತಾರೆ. ಇತರ ಹಿಂದೂ ಸಮುದಾಯಗಳ ಹಾಗೂ ನೆರೆ ಹೊರೆಯವರ ಪ್ರಭಾವಗಳಿಂದ ವರದಕ್ಷಿಣೆ ಪದ್ಧತಿಯೂ ಇವರಲ್ಲಿ ರೂಢಿಯಲ್ಲಿದೆ. ಪಿತೃ ಆರಾಧನೆ, ಭೂತಾರಾಧನೆ, ಸರ್ವಚೇತನವಾದ, ಆಲೌಕಿಕ ಶಕ್ತಿ ಆರಾಧನೆ, ಕುಲದೇವತಾ ಆರಾಧನೆ ಇತ್ಯಾದಿಗಳು ಮರಾಟಿ ನಾಯ್ಕರ ಧರ್ಮದ ಮುಖ್ಯ ಗುಣಲಕ್ಷಣವಾಗಿದೆ.

ಮರಾಟಿ ನಾಯ್ಕ ಹಿಂದೆ ಅನೇಕ ವರ್ಷಗಳ ಕಾಲ ಕುಮೇರಿ ಬೇಸಾಯ (Shifting ultiration) ಮಾಡುತ್ತಾ ಕಾಡಿನಿಂದ ಕಾಡಿಗೆ ತಮ್ಮ ವಸತಿಯನ್ನು ಬದಲಾಯಿಸುತ್ತಿದ್ದರು. ಇದು ಇವರ ಅಲೆಮಾರಿ ಬುಡಕಟ್ಟು ಲಕ್ಷಣವನ್ನು ಸೂಚಿಸುತ್ತದೆ. ಹಾಗಾಗಿ ಮರಾಟಿಗರನ್ನು ಕುಂಬ್ರಿ ಮರಾಠಿಗರು ಎಂದು ಕರೆಯುವ ವಾಡಿಕೆ ಇದೆ. ಸಾಮಾನ್ಯವಾಗಿ ಇವರ ಪುರುಷರು ಬೇಟೆಯಾಡುವುದು ಅಕ್ಕಿ ಮುಡಿ ಕಟ್ಟುವುದು, ಬಾವಿ ತೋಡುವುದು, ಮರ ಕಡಿಯುವುದು, ಕಂಬಳದ ಕೋಣಗಳನ್ನು ಸಾಕುವುದು, ತರಕಾರಿ ಕೃಷಿ, ಕಾಡಿನಿಂದ ಜೇನು ಸಂಗ್ರಹಿಸುವುದು ಹಾಗೆಯೇ ಮಹಿಳೆಯರು ಚಾಪೆ ತಯಾರಿಸುವುದು ಇತ್ಯಾದಿ ಕೆಲಸಗಳನ್ನು ಮಾಡಲು ತನ್ನದೇ ಆದ ದೇಶಿ ಜ್ಞಾನ ಮತ್ತು ನೈಪುಣ್ಯತೆಗಳನ್ನು ಗಳಿಸಿದವರಾಗಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ 1961ರಂದು ಭೂಸುಧಾರಣಾ ಕಾಯ್ದೆಯಿಂದಾಗಿ ಗೇಣಿಪದ್ಧತಿಯನ್ನು ಅನುಸರಿಸಿಕೊಂಡು ಹೋಗುತ್ತಿದ್ದ ಅನೇಕ ಮರಾಟಿ ನಾಯ್ಕ ಕುಟುಂಬಗಳಿಗೆ ತಮ್ಮ ಮಾಲಕರಿಂದ ಭೂಮಿ ಪಡೆಯಲು ಅನುಕೂಲವಾಯಿತು. ಆದರೆ ಕೆಲವು ಕುಟುಂಬಗಳಿಗೆ ಅತೀ ಕಡಿಮೆ ಭೂಮಿ ಲಭಿಸಿತು. ಇನ್ನು ಕೆಲವು ಕಡೆ ಭೂಮಿ ಸಿಗದೆ ವಿವಾದಗಳು ನಡೆದ ಮತ್ತು ನಡೆಯುತ್ತಿರುವ ಕುರಿತು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ. ಅಲ್ಲದೆ ಇವರ ಬಡತನ ಅನಕ್ಷರತೆ, ಅಜ್ಞಾನದಿಂದಾಗಿ ಇನ್ನೂ ಅನೇಕ ಕುಟುಂಬಗಳಿಗೆ ಭೂಸುಧಾರಣ ಯೋಜನೆಯಲ್ಲಿ ಭೂಮಿ ಪಡೆಯಲು ಅಸಾಧ್ಯವಾಯಿತು. ತಮ್ಮ ಭೂಮಾಲಕರೊಂದಿಗೆ ಹೋರಾಟ ಮಾಡಲು ವಿಫಲರಾದವರು ಬೇರೆಡೆ ಹೋಗಿ ಗುಡ್ಡ ಬೆಟ್ಟ ಪ್ರದೇಶದಲ್ಲಿ ನೆಲೆಸಬೇಕಾಯಿತು.

ಒಟ್ಟಿನಲ್ಲಿ ಇವರು ಶ್ರಮದಿಂದ ಬದುಕುವ ರಾಜ್ಯದ ಒಂದು ದುರ್ಬಲ ವರ್ಗದ ಜನಾಂಗವೆಂದು ಪರಿಗಣಿಸಬಹುದು. ಈಗಾಗಲೇ ವಿವರಿಸಿದಂತೆ ಇವರು ಆರ್ಥಿಕವಾಗಿ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದೂ ಸಾಮಾಜಿಕವಾಗಿ ಕೆಳಮಟ್ಟದಲ್ಲಿದ್ದೂ ಹಾಗೂ ರಾಜಕೀಯವಾಗಿ ಅಸಂಘಟಿತರಾಗಿದ್ದಾರೆ.

**ಇ) ಮರಾಟಿ**

ಮರಾಟಿ ಬುಡಕಟ್ಟಿನವರನ್ನು ಮರಾಠಿ ಅಥವಾ ಮರಾಠ ಎಂಬುದಾಗಿ ಕೂಡ ಕರೆಯುತ್ತಾರೆ. ತಮ್ಮನ್ನು ತಾವು ಕ್ಷತ್ರಿಯರೆಂದು ಗುರುತಿಸಿಕೊಂಡು ಕ್ಷತ್ರಿಯ ಮರಾಠಿ ಎಂತಲೂ, 'ಆರ್ಯ', 'ಅರೇರು' ಎಂಬುದಾಗಿ ಗುರುತಿಸಿ ಆರ್ಯ ಯಾನೆ ಮರಾಠ ಎಂಬುದಾಗಿ ಗುರುತಿಸಿಕೊಂಡಿರುವವರು. ಇವರು ಅಸ್ಪೃಶ್ಯರಲ್ಲ. ಬ್ರಾಹ್ಮಣೇತರ ಮರಾಟಿಗಳು. ಛತ್ರಪತಿ ಶಿವಾಜಿ ಹಾಗೂ ಪೇಶ್ವೆಯವರ ಕಾಲದಲ್ಲಿ ಸೈನ್ಯದಲ್ಲಿ ಸೈನಿಕರಾಗಿದ್ದು, ಕಾರಣಾಂತರಗಳಿಂದ ಕರ್ನಾಟಕ ಮತ್ತು ಕೇರಳ ರಾಜ್ಯದ ಬೆಟ್ಟ, ಪರ್ವತದಂಚಿಗೆ, ಗಿರಿಕಂದರಗಳತ್ತ ಬಂದು ಅಲ್ಲಿಯೇ ನೆಲೆಸಿದ್ದು ಕಾಲಕ್ರಮೇಣ ಬುಡಕಟ್ಟೀಕರಣಕ್ಕೊಳಗಾದರು. ದಕ್ಷಿಣಕನ್ನಡದಲ್ಲಿ ನೆಲೆಸಿದವರು 'ಮರಾಟಿ'ಗಳೆಂದು ಹಾಗೂ ಕೊಡಗು ಜಿಲ್ಲೆಯಲ್ಲಿ ನೆಲೆಸಿದವರನ್ನು 'ಮರಾಠಿ'ಯವರೆಂದು ಕರೆಯುತ್ತಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಇವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿಸಿರುವರು.

15ನೇ ಶತಮಾನಕ್ಕೆ ಕರ್ನಾಟಕದ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಗೆ ವಲಸೆ ಬಂದಿರಬಹುದಾದ ಮರಾಟಿಗರ ಜನಸಂಖ್ಯೆ ಇಂತಿವೆ. ಮದ್ರಾಸ್ ಸರಕಾರ 1901ರಲ್ಲಿ ಜನಗತಿಯ ಪ್ರಕಾರ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇವರ ಜನಸಂಖ್ಯೆ 31,351 ಎಂದು ದಾಖಲಾಗಿರುತ್ತದೆ. 1931 ಹಾಗೂ 1941ರ ಜನಗಣತಿ ಪ್ರಕಾರ ಮದ್ರಾಸ್ ರಾಜ್ಯದಲ್ಲಿಯ ಮರಾಟಿಗರ ಜನಸಂಖ್ಯೆ ಕ್ರಮವಾಗಿ 33,992 ಮತ್ತು 37,485, 1971ರಲ್ಲಿ 48,840, 1981–65,822, 1991ರಲ್ಲಿ 75,708, 2001ರಲ್ಲಿ 63,549 ಎಂಬುದಾಗಿ ದಾಖಲಾಗಿದೆ.

ಮರಾಠಿ, ಮರಾಠ ಇಲ್ಲವೆ ಮರಾಟಿ ಪದಗಳು ಮಹಾರಾಷ್ಟ್ರ ಮೂಲದವು. 'ಮರಹಾಟಿ' ಪದವು ಕನ್ನಡದ 'ಮರ' ಮತ್ತು 'ಹಟ್ಟಿ' ಪದಗಳ ರೂಪಾಂತರ ಪದ ಹಾಗೂ ಮಹಾರಾಷ್ಟ್ರ, ಮರಾಠಿ ಪದವು ಮರಹಾಟಿ ಪದದಿಂದ ಸಂಸ್ಕೃತಿಗೊಂಡ ಪದ ಎಂಬುದಾಗಿ ಬಹುತೇಕ ವಿದ್ವಾಂಸರ ಅಭಿಪ್ರಾಯವಾಗಿದೆ. 'ಮರವರು' ಹಾಗೂ ಹಟ್ಟಿಗಳು ಕನ್ನಡ ಪಶುಪಾಲಕರೆಂದು **ಶಂ.ಭಾ. ಜೋಷಿ**ಯವರ ಅಭಿಪ್ರಾಯವಾಗಿದೆ. ಮರಾಟಿ ಬುಡಕಟ್ಟಿನವರನ್ನು ತುಳುವರು

ಮತ್ತು ಸ್ಥಳೀಯರು ಆರೆ ಮರಾಟಿ, ಕಾಡು ಮರಾಟಿ, ಕನಡೇರು, ಛತ್ರಿಯಮರಾಟಿ, ಮರಾತೇರು, ಮರಾಠ, ಮರಾಠಿ, ಅರೇರು ಎಂಬ ಪದಗಳಿಂದ ಕರೆಯುವರು. ಇವರ ಹೆಸರುಗಳೊಂದಿಗೆ ಹೆಚ್ಚಾಗಿ ರಾವ್, ಜೀ, ಓಜಿ, ಎಂತಲೂ ಕರೆಯುತ್ತಾರೆ. ಈ ಮೂರು ಪದಗಳು ಗೌರವ ಮರ್ಯಾದೆ ಸೂಚಕ ಪದಗಳು ಅವರ ಹೆಸರಿನೊಂದಿಗೆ ಸಬಲೀಕರಣಗೊಂಡಿರುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ, ಮುಲ್ಕಿ ಹೋಬಳಿಯ ಕವತ್ತಾರು, ಯಳತ್ತೂರು, ಕೊಲ್ಲೂರು ಕುಕ್ಕಿಕಟ್ಟೆಯಲ್ಲಿ 73 ಮನೆಗಳಿದ್ದು, ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಹಿರೇಯಂಗಡಿ, ಜೋಡುಕಟ್ಟೆ, ಕುಂಚಾಲಪ್ಪಾಡಿ, ಕಾರ್ಕಳ ಪಟ್ಟಣ, ಸಾಣೂರುಗಳಲ್ಲಿ ಸುಮಾರು 155 ಕುಟುಂಬಗಳು ವಾಸವಾಗಿರುವುದನ್ನು ಕ್ಷೇತ್ರಕಾರ್ಯಗಳಲ್ಲಿ ಮನಗಂಡಿರುವೆವು. ಇವರಲ್ಲಿ ಬಳಿ ಪದ್ಧತಿ ಚಾಲ್ತಿಯಲ್ಲಿದೆ. ಸುಮಾರು 96 ಬಳಿ ಇರುವುದೆಂದು ಮಾಹಿತಿದಾರರು ತಿಳಿಸಿರುವರು.

ಕ್ಷೇತ್ರಕಾರ್ಯ ಸಂದರ್ಭದಲ್ಲಿ ಲಭಿಸಿರುವ ಬಳಿಗಳು ಹೀಗಿದೆ. ಅಪ್ಪಲ್, ಬೆಡ್ಕಂ, ಬೆಡೇಕರ್, ಬೊಂಸ್ಲೆ, ಚವ್ಹಾನ, ಮೊರೆ, ದೇವಕರ, ಜಗತಾಪ, ಜಾದವ, ರಾಥೋಡ್, ಪವಾರ, ಸಿಂಧೆ, ಸೆಪ್ಪೇಕರ, ತಾಮಸ್, ಉಬ್ಲೇಕರ, ವಾಗ್ಮಾನ್, ವಿಡೆ ಮುಂತಾದ 27 ಬಳಿಗಳು ದೊರೆತಿವೆ. ಇವು ಇವರಲ್ಲಿ ಅಡ್ಡ ಹೆಸರುಗಳಾಗಿಯೂ ಬಳಕೆಯಾಗುವುವು. ಇವುಗಳಲ್ಲಿ ವೈವಾಹಿಕ ಸಂಬಂಧ ಬೆಳೆಸುವಲ್ಲಿ ಸಹಕಾರಿಯಾಗಿದೆ. ಪ್ರಾಚೀನಕಾಲದಲ್ಲಿ ವಧು ದಕ್ಷಿಣೆ ಪದ್ಧತಿಯ ಬದಲಾಗಿ ವರದಕ್ಷಿಣೆ ಪದ್ಧತಿ ಕಾಲಿರಿಸಿದೆ. ಸಮುದಾಯದ ಹಿರಿಯರ ಬದಲಾಗಿ ಬ್ರಾಹ್ಮಣರನ್ನು ಸಂಪ್ರದಾಯಿಕ ಕಾರ್ಯಗಳಿಗೆ ಕರೆಯಲಾಗುತ್ತಿದೆ.

**ಈ) ಕುಣುಬಿ**

ಕುಣುಬಿಯವರು ಪ್ರಮುಖವಾಗಿ ಕರ್ನಾಟಕದ ಕರಾವಳಿ ಪ್ರದೇಶ ವ್ಯಾಪ್ತಿಯ ಉತ್ತರಕನ್ನಡ ಜಿಲ್ಲೆಯ ಕಾರವಾರ, ಹೊನ್ನಾವರ, ಅಂಕೋಲ, ಯಲ್ಲಾಪುರ, ಜೊಯಿಡಾ ತಾಲೂಕುಗಳಲ್ಲಿ ಸಾಂದ್ರವಾಗಿ ಕಾಣಿಸಿಕೊಳ್ಳುತ್ತಾರೆ. ಇವರು ಕೃಷಿ ಜೀವನ ನಡೆಸುವ ಜಾತಿ. ಈ ಜಾತಿಯ ಜನರನ್ನು ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಕೇರಳ ರಾಜ್ಯದಲ್ಲಿ ಕುಡುಂಬಿ, ಮಧ್ಯಪ್ರದೇಶದಲ್ಲಿ ಕುಬಂಬಿ, ಕುರ್ಮಿ, ಆಹಿರ್, ಮಹಾರಾಷ್ಟ್ರದಲ್ಲಿ ಕುಣುಬಿ, ಮರಾಠ ಕುಣುಬಿ, ಅಹಿರ್, ಒರಿಸ್ಸಾದಲ್ಲಿ ಕುಡುಂಬಿ, ಕುಲ್ಮಿ, ಕುರ್ಮಿ, ತಮಿಳುನಾಡಿನಲ್ಲಿ ಕುರುಂಬಾ, ಕುಡುಂಬೋ, ಗುಜರಾತ್‌ದಲ್ಲಿ ಲೇವಾ ಕುಣುಬಿ, ಪಟಿದಾರ, ಅಹಿರ್ ಮತ್ತು ಗೋವಾದಲ್ಲಿ ಕುಣುಬಿ ಇತ್ಯಾದಿ (2006 ಪುಟ: 2–3)

ಸುಮಾರು 400 ವರ್ಷಗಳ ಹಿಂದೆ ಕುಣುಬಿಯವರು ಗೋವೆಯಿಂದ ವಲಸೆ ಬಂದಿರುವರು. ಕುಣುಬಿಗಳಂತೆಯೇ ಮರಾಠಿ, ಮರಾಟಿ ನಾಯ್ಕ, ರಾಮಕ್ಷತ್ರಿಯ, ಗೌಡ ಸಾರಸ್ವರ ಬ್ರಾಹ್ಮಣ, ರೋಮನ್ ಕೆಥೋಲಿಕ್, ಮರಾಟಿ, ಕುಡುಬಿ ಮುಂತಾದ ಕೆಲವು ಸಮುದಾಯಗಳು ವಿವಿಧ ಕಾರಣಗಳಿಂದಾಗಿ ಗೋವಾ ಹಾಗೂ ಆಸುಪಾಸಿನ ಪ್ರದೇಶಗಳಲ್ಲಿ 15 ಹಾಗೂ 16ನೇ ಶತಮಾನದ ನಡುವೆ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದರು.

ಜೆರೋಮ್ ಸಾಲ್ಡಾನಾ ಅವರ ಅಭಿಪ್ರಾಯ ಸುಮಾರು 16ನೇ ಶತಮಾನದಲ್ಲಿ ಬ್ರಾಹ್ಮಣರು ಮತ್ತು ಇತರ ಹಿಂದೂ ಸಮುದಾಯದವರು ಬಹುಸಂಖ್ಯೆಯಲ್ಲಿ ಗೋವೆಯನ್ನು ತ್ಯಜಿಸಿ ಕೆನರಾದಲ್ಲಿ ನೆಲೆ ನಿಂತರು(1938 : 34)

ಆ್ಯಟೋನಿಯೋ ಮಸ್ಕರೇನಸ್‌ರವರು ಹೇಳುವಂತೆ ಕುಣುಬಿಯವರು ಮುಂಡಾ ಆಸ್ಟ್ರಾಡ್ ಕುಲಕ್ಕೆ ಸೇರಿದ ಜನಾಂಗದವರಾಗಿರುವರು (1970 : 20) ಸ್ಟೀಪನ್ ಫುಕ್ಸ್‌ರವರ ಪ್ರಕಾರ ಕುಣುಬಿಗಳು ಆಹಾರ ಸಂಗ್ರಹಿಸುವ ಮತ್ತು ಭೇಟೆಯಾಡುವ ದಕ್ಷಿಣ ಭಾರತದ ಒಂದು ಬುಡಕಟ್ಟು ಸಮುದಾಯವಾಗಿರುತ್ತದೆ. (1973 : 246)

ಕರಾವಳಿ ಕರ್ನಾಟಕದಲ್ಲಿ ಕುಣುಬಿಯವರು ಗೋವಾ ಮೂಲದ ಬುಡಕಟ್ಟಿನವರು. ಇವರು ಸುಮಾರು 1504 ರಿಂದ 1509ರ ಸಮಯದಲ್ಲಿ ಪೋರ್ಚುಗೀಸರ ಅಲ್ಬುಕರ್ಕನಿಂದ ದಬ್ಬಾಳಿಕೆ, ಬಲತ್ಕಾರದ ಮತಾಂತರಕ್ಕೊಳಬೇಕಾದ ಗಂಡಾಂತರ ಬಂತು. ಇದನ್ನು ಪ್ರತಿಭಟಿಸಿ ಅಲ್ಲಿಂದ ತಪ್ಪಿಸಿಕೊಂಡು ಕರಾವಳಿ ಜಿಲ್ಲೆಯಾದ ಉತ್ತರಕನ್ನಡ, ಉಡುಪಿ ಹಾಗೂ ದಕ್ಷಿಣಕನ್ನಡ ಜಿಲ್ಲೆಗಳಿಗೆ ವಲಸೆ ಬಂದಿದ್ದಾರೆ.

**ಉ) ಕುಡುಬಿ**

ಕುಡುಬಿಯವರು ಗೋವಾ ರಾಜ್ಯದ ಮೂಲ ನಿವಾಸಿಗಳ ಗುಂಪಿಗೆ ಸೇರಿದವರಾಗಿದ್ದು ಸುಮಾರು ನಾಲ್ಕು ಶತಮಾನಗಳ ಹಿಂದೆ ಕರಾವಳಿ ಜಿಲ್ಲೆಯಾದ ಅವಿಭಜಿತ ಜಿಲ್ಲೆಗೆ ಹಾಗೂ ಉತ್ತರಕನ್ನಡ ಪ್ರದೇಶಕ್ಕೆ ವಲಸೆ ಬಂದು ನೆಲೆನಿಂತವರಾಗಿರುತ್ತಾರೆ. ಇವರ ನೆಲೆಗಳು ಹೆಚ್ಚಾಗಿ ಊರಿನಿಂದ ದೂರವಿದ್ದು, ಪರ್ವತ, ಕಾಡಿನ ಮಧ್ಯೆ ಅಥವಾ ಬೆಟ್ಟ, ಪರ್ವತ, ಕಾಡಿನಂಚಿನಲ್ಲಿ ಕಂಡುಬರುತ್ತದೆ. ಕುಂದಾಪುರ ತಾಲೂಕಿನ ಹಾಲಾಡಿ ಹೊಳೆಯಿಂದ ದಕ್ಷಿಣಕ್ಕೆ ವಾಸ್ತವ್ಯವಿರುವ ಉಡುಪಿ ತಾಲೂಕನ್ನು ಒಳಗೊಂಡು ಕುಡುಬಿಯವರನ್ನು ಗೋವೆ ಕುಡುಬಿಯವರೆಂದು ಕರೆಯುತ್ತಾರೆ. ಕುಂದಾಪುರ ತಾಲೂಕಿನ ಹಾಲಾಡಿ, ಹಾರ್ದಳ್ಳಿ, ಹೇರೂರು, ಗೋಳಿಯಂಗಡಿ, ಹೊಸಂಗಡಿ, ವಂಡಾರು, ಅಂಪಾರು, ಹೊಸಂಗಡಿ, ಕಮಲಶಿಲೆ, ಬೆಳ್ವೆ ಮುಂತಾದ ಗ್ರಾಮಗಳಲ್ಲಿ ವಾಸ್ತವ್ಯವಿರುವವರನ್ನು ಹೆಚ್ಚಾಗಿ ಗೋವೆ ಕುಡುಬಿಯವರೆಂದು ಕರೆಯುವರು. ಮಂಗಳೂರು ತಾಲೂಕಿನ ಬಜಪೆ, ಕೊಂಪದವು, ಮುಚ್ಚೂರು, ಎಡಪದವು, ಕುಪ್ಪಪದವು, ಗಂಜೀಮಠ, ಮೂಡಬಿದರೆ, ಬಂಟ್ವಾಳ ತಾಲೂಕಿನ ಕೆಲವೊಂದು ಗ್ರಾಮಗಳಾದ ರಾಯಿ, ಕ್ಕೊಲ, ಸಿದ್ಧಕಟ್ಟೆ, ಪ್ರದೇಶದವರನ್ನು ಕೊಡಿಯಾಲ ಕುಡುಬಿ ಎನ್ನುವರು.

ಕುಂದಾಪುರದ ಉತ್ತರಕ್ಕೆ ಕಾರ್ಕಳ ತಾಲೂಕಿನ ಮಿಯ್ಯಾರು, ಹೆಬ್ರಿ, ಸುರ್ಗೋಳಿ, ಶಿವಪುರ, ಕಬ್ಬಿನಾಲೆ, ಮುದ್ರಾಡಿ, ಮಡಾಮಕ್ಕಿ, ಮುದ್ರಾಡಿ ಪರಿಸರದ ಕುಡುಬಿಯವರನ್ನು ನಾಡ ಕುಡುಬಿಯವರೆಂದು ಕರೆಯುತ್ತಾರೆ. ಕುಂದಾಪುರ ತಾಲೂಕಿನ ಸಿದ್ಧಾಪುರ, ಹೊಸಂಗಡಿ, ಹಲರಿಮಠ ಎಂಬಲ್ಲಿ ವಾಸ್ತವ್ಯವಿರುವ ಕೆಲವೊಂದು ಕುಡುಬಿ ಕುಟುಂಬದವರನ್ನು ಜೋಗಿ ಕುಡುಬಿಯವರೆಂದು ಕರೆಯುತ್ತಾರೆ. ಅಲ್ಲದೆ ಕುಂದಾಪುರ ತಾಲೂಕಿನ ಉತ್ತರಕ್ಕೆ ಬೈಂದೂರು, ಕೊಲ್ಲೂರು, ಅರೆಶಿರೂರು, ಮಾಸ್ತಿಕಟ್ಟೆ, ಮಾರ್ನಕಟ್ಟೆ ಪ್ರದೇಶದಲ್ಲಿ ವಾಸ್ತವಿರುವ ಕುಡುಬಿಯವರನ್ನು ಅರೆಕುಡುಬಿಯವರೆಂದು ಕರೆಯುತ್ತಾರೆ.

ಕುಡುಬಿಯವರು ಇಂಡೋ–ಆರ್ಯನ್ ಭಾಷೆಗೆ ಸೇರಿದ ಕೊಂಕಣಿ ಭಾಷೆಯನ್ನು ಮಾತನಾಡುತ್ತಾರೆ. ಈ ಸಮುದಾಯದವರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಮುಖ್ಯವಾಗಿ ತುಳುವರ ಸಾಮಾಜಿಕ – ಸಾಂಸ್ಕೃತಿಕ ವ್ಯವಸ್ಥೆಯ ಪ್ರಭಾವ ಬೀರಿದ್ದರಿಂದ ತಾವು ಆಡುವ ಭಾಷೆಯಲ್ಲಿ ತುಳು ಹಾಗೂ ಕನ್ನಡ ಶಬ್ದಗಳನ್ನು ಉಪಯೋಗಿಸುತ್ತಾರೆ. ಕುಡುಬಿ ಸಮುದಾಯದ ಪುರುಷರು ತಮ್ಮ ಹೆಸರಿನ ಮುಂದೆ 'ನಾಯ್ಕ' ಮತ್ತು 'ಗೌಡ' ಎಂಬ ಅಡ್ಡ ಹೆಸರನ್ನು ಜೋಡಿಸುತ್ತಾರೆ. ಹೆಂಗಸರು ಬಾಯಿ / ಬ್ಯಾ ಎಂಬ ಪದವನ್ನು ಸೇರಿಸಿಕೊಳ್ಳುತ್ತಾರೆ. ಇವರು ಹೆಚ್ಚಾಗಿ ಶ್ರಮಿಕ ವರ್ಗದವರಾದ್ದರಿಂದ ದುಡಿಮೆಗೆ ಅನುಕೂಲವಾದ ಬಟ್ಟೆ ಬರೆಗಳನ್ನು ತೋಡುತ್ತಾರೆ. ಹಿರಿಯ ತಲೆಮಾರಿನ ಜನರು ಸಾಮಾನ್ಯವಾಗಿ ತಲೆಯ ಹಿಂದೆ ಜುಟ್ಟು ಬಿಡುತ್ತಾರೆ. ಅವರಲ್ಲಿ ಜುಟ್ಟು ಕತ್ತರಿಸಬಾರದು ಎಂಬ ನಂಬಿಕೆಯ ನಿಯಮವಿದೆ. ಹಿಂದೆ ಜುಟ್ಟು ಕತ್ತರಿಸಿಕೊಂಡರೆ ಜಾತಿ ಪಂಚಾಯತಿಗೆ ನಡೆಸಿ ದಂಡ ವಿಧಿಸುತ್ತಿದ್ದರು. ಇಂದು ಯುವ ಜನಾಂಗ ಜುಟ್ಟನ್ನು ಕತ್ತರಿಸಿಕೊಳ್ಳುತ್ತಾರೆ. ಮಹಿಳೆಯರ ವಿಶಿಷ್ಟವಾದ ಉಡುಪುಗಳಿಂದ ಕುಡುಬಿಯವರೆಂದು ಗುರುತಿಸಬಹುದು. ಇವರು ಬಣ್ಣ ಬಣ್ಣದ ಸೀರೆಯನ್ನು ಎದೆಯ ಮಟ್ಟದವರೆಗೆ ಸುತ್ತಿ 'ಗೇಂಟಿ' ಹಾಕುತ್ತಾರೆ.

ಕುಡುಬಿ ಸಮುದಾಯದಲ್ಲಿ ವಂಶದ ಅರ್ಥವನ್ನು ಸೂಚಿಸಲು ಬಳಿ, ಬರಿ (ತುಳುಪದ) ಪದಗಳನ್ನು ರೂಢಿಯಲ್ಲಿದೆ. ಡಾ. ಅಭಯ ಕುಮಾರ್ ಅವರು ಗೋವಾ ಕುಡುಬಿಯವರಲ್ಲಿ 36 ಬಳಿಗಳಿವೆ ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಡಾ. ವೈ. ರವೀಂದ್ರನಾಥ ರಾವ್ ಅವರು ಕರಾವಳಿ ಕರ್ನಾಟಕದಲ್ಲಿ ವಾಸ್ತವ್ಯವಿರುವ ಕುಡುಬಿ ಬುಡಕಟ್ಟುಗಳಲ್ಲಿ ಸುಮಾರು 122 ಬಳಿಗಳಿವೆ ಎಂಬುದಾಗಿ ತಿಳಿಸಿದ್ದಾರೆ. ಡಾ.ಎ.ವಿ. ನಾವಡರವರು ಕುಡುಬಿಯವರಲ್ಲಿ 16 ಬಳಿಗಳನ್ನು ಗುರುತಿಸಿದ್ದಾರೆ. ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ 20 ಬಳಿಗಳನ್ನು ಗುರುತಿಸಲಾಗಿದೆ. ಈ ಎಲ್ಲಾ ಬಳಿಗಳ ಪ್ರಾಣಿಪಕ್ಷಿಗಳು, ನೀರ್ಜೀವ ಮತ್ತು ಭೌತ ವಸ್ತುಗಳು, ಊರುಗಳಿಗೆ ಸಂಬಂಧಿಸಿದವುಗಳು, ಅಧಿಕಾರ, ಸಾಮರ್ಥ್ಯ, ಸಂಪತ್ತುಗಳಿಗೆ ಹೊಂದಿಕೊಂಡು ಬಂದಿರುವ ಬಳಿಗಳು ಹಾಗೂ 'ಕಾರ್' ಎಂಬ ಪ್ರತ್ಯಯಗಳಿಂದ ಅಂತ್ಯವಾಗುವ ಹೆಸರು ಹಾಗೂ ಕುಲಗಳು ಉದಾ: ಗುಗ್ಗುಲ್‌ಕಾರ್, ಕುತ್ಕಾರ್, ಪತ್ಕಾರ್, ನಾಯ್ಕರ್, ವಾಘನಕಾರ್, ದುಕ್ಕಾರ್, ಮೊಕ್ಕರ್, ಡೇವಿಡ್ಕರ್, ಜಟ್ಕರ್, ಶಿವಗಣ್, ಕೊಚ್ಚಿಕಾರ್ ಇತ್ಯಾದಿ.

ಕುಡುಬಿಯವರು ಪಿತೃವಂಶಿಯ, ಪಿತೃಪ್ರಧಾನ, ಪಿತೃಮೂಲಿಯ ಕುಟುಂಬ ವ್ಯವಸ್ಥೆಯನ್ನು ಹೊಂದಿದವರಾಗಿದ್ದಾರೆ. ಅವಿಭಕ್ತ ಕುಟುಂಬ ಪದ್ದತಿಯನ್ನು ಹೊಂದಿದ್ದು, ಹಿಂದೆ ಒಂದೊಂದು ಕುಟುಂಬದಲ್ಲಿ 40ಕ್ಕಿಂತ ಹೆಚ್ಚು ಸದಸ್ಯರ ಸಂಖ್ಯೆ ಹೊಂದಿದ್ದು ಎಂದು ಕುಡುಬಿ ಸಮುದಾಯದ ಹಿರಿಯರು ನೆನಪಿಸಿಕೊಳ್ಳುತ್ತಿದ್ದಾರೆ. ಅವಿಭಕ್ತ ಕುಟುಂಬ ಪದ್ಧತಿಯನ್ನು ಅನುಸರಿಸುವ ಇವರು ಒತ್ತು ಘರ್ (ಕುಟುಂಬ) ಒಲಘರ್ (ದೊಡ್ಡ ಕುಟುಂಬ) ಅಥವಾ ಸಗಾಲೆ ಕುಟುಂಬ (ಒಂದೇ ಸಂತತಿಗೆ ಸೇರಿದವರು) ಎಂದು ಕರೆಯುತ್ತಾರೆ. ಮನೆಯ ಹಿರಿಯ ವ್ಯಕ್ತಿಯೇ ಇಡೀ ಕುಟುಂಬದ ಸಾಮಾಜಿಕ, ಆರ್ಥಿಕ, ಆಚರಣೆಗಳನ್ನು ನಿಯಂತ್ರಿಸುವವನಾಗಿರುತ್ತಾನೆ. ಅಲ್ಲದೇ ಯಾವುದೇ ಧಾರ್ಮಿಕ, ವಿವಾಹ, ಶುಭಾಶುಭಕಾರ್ಯಗಳು ಇವರ ಮುಂದಾಳತ್ವದಲ್ಲಿ ಜರಗುತ್ತದೆ. ಆಸ್ತಿಯ ಹಕ್ಕು ಸಾಮಾನ್ಯವಾಗಿ ಪಿತೃ ಪ್ರಧಾನವಾಗಿರುತ್ತದೆ. ತಂದೆಯ ನಂತರ ಮನೆಯ ಹಿರಿಯ ಗಂಡು ಮಗನಿಗೆ ಬರುತ್ತದೆ.

ಕುಡುಬಿಯರ ಆರ್ಥಿಕ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೇ ಒಂದು ರೀತಿಯಲ್ಲಿ ಬುಡಕಟ್ಟು ರೀತಿಯಾಗಿರುವ ಆಹಾರ ಸಂಗ್ರಹಣೆ, ಬೇಟೆ, ಕುಮೇರಿ

ಕೃಷಿ, ಕುಸುಬುಗಳಿಂದ ಹಂತ ಹಂತವಾಗಿ ವಿಕಾಸಗೊಂಡಿರುವುದಾಗಿದೆ. ವಸಾಹತುಶಾಹಿ ಕಾಲ ಪೂರ್ವದಲ್ಲಿ ಭಾರತೀಯ ಅನೇಕ ಬುಡಕಟ್ಟುಗಳು ಒಂದಲ್ಲಿ ಒಂದು ರೀತಿಯಲ್ಲಿ ಆರ್ಥಿಕ ಸೌಲಭ್ಯದಿಂದ ವಂಚಿತರಾಗಿರುವರು. ಇತರ ಸಮುದಾಯದವರು ಭೂಮಿಯನ್ನು ಆಕ್ರಮಿಸಿಕೊಂಡು, ಅವರ ಭೂಮಿಯಲ್ಲಿಯೇ ಬುಡಕಟ್ಟುಗಳನ್ನು ಜೀತದಾಳುಗಳಾಗಿ ದುಡಿಸಿಕೊಳ್ಳುತ್ತಾ ಬಂದಿರುತ್ತಾರೆ. ಯಾವಾಗ ಇವರು ಗೋವಾದಿಂದ ವಲಸಿಗರಾಗಿ ಬಂದರೋ ಆಗಿನಿಂದಲೇ ಬದುಕಿನಲ್ಲಿ ಆರ್ಥಿಕ ಸ್ಥಿತ್ಯಾಂತರಕ್ಕೆ ಒಳಗಾದರು. ಕರಾವಳಿ ಭಾಗಕ್ಕೆ ವಲಸೆ ಬಂದು ಮೇಲ್ಜಾತಿಯವರಾದ ಬ್ರಾಹ್ಮಣರ ಹಾಗೂ ಭೂಮಾಲಕರ ಮನೆಗಳಲ್ಲಿ, ತೋಟದಲ್ಲಿ ಕೆಲಸದಾಳುಗಳಾಗಿ ಸೇರಿಕೊಂಡರು. ನಂತರ ಅವರ ಜಾತಿ ಹೆಸರಿಗೆ ತಕ್ಕಂತೆ ಮೂಲತಃ ಕುಮೇರಿ ಕೃಷಿಯ ಅನುಭವವಿದ್ದರಿಂದ ತಾವು ವಾಸ್ತವ್ಯವಿರುವ ಕಾಡಿನಂಚಿನಲ್ಲಿಯೇ ಗುದ್ದಲಿಗಳು ಹಾಗೂ ಮರದಿಂದ ಮಾಡಿದ ಸಲಕರಣೆಗಳನ್ನು ಬಳಸಿಕೊಂಡು ಕುಮೇರಿ ಕೃಷಿ ಅಥವಾ ಕೆತ್ಲು-ಬೇಸಾಯ ಪದ್ಧತಿಯಲ್ಲಿ ಕೃಷಿ ಬೆಳೆ, ಕೈತೋಟ ಮಾಡಿ ಅನೇಕ ಬೆಳೆಗಳನ್ನು ಬೆಳೆಸಿದರು. ಇದೀಗ ತಮ್ಮ ಮೂಲ ಕಸುಬುಗಳಿಂದ ಸ್ಥಿತ್ಯಂತರಗೊಳ್ಳುತ್ತಿರುವುದ್ದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡು ಬಂದಿರುತ್ತದೆ.

ಇಂದು ಬಹುಸಂಖ್ಯಾತ ಕುಡುಬಿಯರು ಅನಕ್ಷರಸ್ಥರಾಗಿದ್ದು, ಶೈಕ್ಷಣಿಕವಾಗಿ ತೀರಾ ಹಿಂದುಳಿದವರಾಗಿದ್ದು, ಇವರು ವಾಸಿಸುತ್ತಿರುವ ದಟ್ಟ ಅರಣ್ಯವಾಗಿರುವುದರಿಂದ ಶಾಲೆಗಳು ತುಂಬಾ ದೂರದ ಅಂತರದಲ್ಲಿರುತ್ತದೆ. ಮಳೆಗಾಲದಲ್ಲಿ ಕೇಳುವವರಾರೂ ಇಲ್ಲ. ಶಾಲೆಗಳು ನಡೆಯುವುದಿಲ್ಲ. ಮಕ್ಕಳ ಮಾತೃಭಾಷೆ ಕೊಂಕಣಿಯಾದ್ದರಿಂದ ಶಿಕ್ಷಕರಿಗೆ ಈ ಭಾಷೆಗೊತ್ತಿಲ್ಲದಿದ್ದರಿಂದ ಮಕ್ಕಳಿಗೆ ಮನವರಿಕೆ ಮಾಡುವುದು ಕಷ್ಟವಾಗುತ್ತದೆ.

ಕುಡುಬಿಯವರು ಪ್ರಕೃತಿ ಆರಾಧಕರಾಗಿದ್ದು, ಸ್ಥಳೀಯ ಭೂತಾರಾಧನೆ, ನಾಗಾರಾಧನೆ, ಪಿತೃರಾಧನೆ, ಕುಲೆ ಆರಾಧನೆಗಳಿಂದ ಪ್ರಭಾವಿತರಾಗಿರುವುದು ಕಂಡುಬರುತ್ತದೆ. ಇವರು ಶಕ್ತಿದೇವತೆಯನ್ನು ಮತ್ತು ಗೋವಾದ ಮಲ್ಲಿಕಾರ್ಜುನ ದೇವರನ್ನು ಪೂಜಿಸುತ್ತಾರೆ. ಹೋಳಿ ಇವರು ಪ್ರಮುಖ ಹಬ್ಬವಾಗಿದೆ. ಈ ಸಂದರ್ಭದಲ್ಲಿ ಶಕ್ತಿ ಅಥವಾ "ಗೋವಾ ಅಮ್ಮ"ವನ್ನು ಪೂಜಿಸುವ ಸಂಪ್ರದಾಯ ಇರುತ್ತದೆ. ಅಲ್ಲದೆ ಸಾಮೂಹಿಕವಾಗಿ ಗುಮ್ಮಟೆ (ಗುಂಬೋಟ್) ಕೋಲಾಟ (ತೋಣಿ) ಜಡೆವೃತ್ಯ (ದೂರೀವಾಚ್) ಎಂಬ ಹೆಸರಿನ ವಿವಿಧ ನೃತ್ಯಗಳನ್ನಾಡುವರು. ಇದೇ ಹಬ್ಬದ ಸಂದರ್ಭದಲ್ಲಿ ವನಭೋಜನ ಹೊಸ ಊಟ, ಯುಗಾದಿ, ಆಷಾಡ ಮತ್ತು ಹಿಂದೂ ಸಂಪ್ರದಾಯ ಹಬ್ಬಗಳನ್ನು ಆಚರಿಸುತ್ತಾರೆ.

ಕುಡುಬಿಯರು ಪರಿಶಿಷ್ಟ ಪಂಗಡಕ್ಕೆ ಸೇರದೇವಿರುವುದರಿಂದ ಬಡತನ ಅಜ್ಞಾನ, ಮೂಢನಂಬಿಕೆಗಳು, ಅನಕ್ಷರತೆ ಮತ್ತು ಅನಾರೋಗ್ಯ ಸ್ಥಿತಿಗತಿಗಳನ್ನು ಅನುಭವಿಸುತ್ತಿರುವ ಪ್ರಮುಖ ಸಮಸ್ಯೆಗಳಾಗಿವೆ. ಆದ್ದರಿಂದ ಸರಕಾರ ಸಂವಿಧಾನಾತ್ಮಕ ಸವಲತ್ತು ಅನುಕೂಲತೆ ಮತ್ತು ರಕ್ಷಣೆ ಒದಗಿಸುವಂತೆ ಮಾಡಬೇಕಾಗಿರುವುದು ಇಂದಿನ ಅಗತ್ಯವಾಗಿದೆ.

**ಗಿ. ಮರಾಟಿ ಸಮುದಾಯಗಳ ಅಧ್ಯಯನದ ತಾತ್ವಿಕತೆ:**

ಡಾ.ಕೆ. ಸುಂದರ ನಾಯಕ್: "ಕರಾವಳಿ ಕರ್ನಾಟಕ ಮರಾಟಿ ಜನಾಂಗ ಪರಂಪರೆ ಮತ್ತು ಆಧುನಿಕತೆ",(2008) ಮರಾಟಿ ಜನಾಂಗದ ಸಾಮಾಜಿಕ ಜೀವನ ವ್ಯವಸ್ಥೆ, ಧಾರ್ಮಿಕ ಆಚರಣೆಗಳನ್ನು, ಅವರ ಜಾನಪದ ಮತ್ತು ಸಂಸ್ಕೃತಿ ಮುಂತಾದ ಮುಖಗಳನ್ನು ಅಧ್ಯಯನ ಮಾಡಿರುತ್ತಾರೆ. ಮರಾಟಿ ಜನಾಂಗವು ತನ್ನ ಪಾರಂಪರಿಕ ಬದುಕಿನಿಂದ ಆಧುನಿಕತೆಗೆ ಪ್ರವೇಶಿಸುವಾಗ ಉಂಟಾಗಬಹುದಾದ ಎಲ್ಲಾ ಬದಲಾವಣೆಗಳನ್ನು ಮತ್ತು ಆ ಸಮುದಾಯ ಎದುರಿಸುತ್ತಿರುವ ತವಕ ತಲ್ಲಣಗಳನ್ನು ಸಮುದಾಯದ ಒಳಗಿನವರಾಗಿ ವಿಶ್ಲೇಷಿಸಿದ್ದಾರೆ. ಅಲ್ಲದೆ, ಅದರದ್ದೆಯಾದ "ಮರಾಟಿ ಜನಾಂಗದ ಶೈಕ್ಷಣಿಕ, ಸಾಂಸ್ಕೃತಿಕ, ಭಾಷಿಕ, ಮತ್ತು ತಾತ್ವಿಕ ಪರಿವರ್ತನೆಗಳು". ಎಂಬ ಲೇಖನದಲ್ಲಿ ಮರಾಟಿ ಸಮುದಾಯದವರ ಶಿಕ್ಷಣ, ಆರ್ಥಿಕ, ಸಾಂಸ್ಕೃತಿಕ, ಭಾಷಿಕ, ಸಾಮಾಜಿಕ ಕ್ಷೇತ್ರಗಳಲ್ಲಾಗಿರುವ ಬದಲಾವಣೆಗಳನ್ನು ಸ್ಥೂಲವಾಗಿ ವಿವರಿಸಿರುತ್ತಾರೆ. ಅವರದ್ದೇ ಮತ್ತೊಂದು ಲೇಖನ. "ಮರಾಟಿ ಜನಾಂಗದ ಜನಪದ ಕಲೆಗಳು" ಎಂಬ ಲೇಖನದಲ್ಲಿ ಮರಾಟಿ ಸಮುದಾಯದಲ್ಲಿ ಕಂಡುಬರುವ ಜನಪದ ಆಟಗಳನ್ನು ಪರಿಚಯಿಸಿ ವಿಶ್ಲೇಷಿಸಿದ್ದಾರೆ.

**ಡಾ.ಎಸ್. ಮೋಹನ್** ಅವರು "ಭೈರವ ಆರಾಧನೆ" (2005) ಎಂಬ ಲೇಖನದಲ್ಲಿ ದಕ್ಷಿಣಕನ್ನಡದಲ್ಲಿ ವಾಸ್ತವ್ಯವಿರುವ ಮರಾಟಿ ಸಮುದಾಯದಲ್ಲಿನ ಮರಾಟಿ ನಾಯ್ಕರು ಆರಾಧಿಸಿಕೊಂಡು ಬಂದಿರುವ ಭೈರವ ದೈವದ ಬಗ್ಗೆ ವಿವರಣೆ ನೀಡಿರುತ್ತಾರೆ. ಆತ ದುಷ್ಟಶಕ್ತಿಯ ನಿಗ್ರಹಕ ಮತ್ತು ಸಮೃದ್ಧಿಯ ಪರಿಕಲ್ಪನೆಯ ಆಶಯವನ್ನು ಪ್ರಕಟಿಸುವ ದೈವ ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಅವರದ್ದೆಯಾದ ಮತ್ತೊಂದು ಲೇಖನ "ಮರಾಟಿ ಬುಡಕಟ್ಟಿನ ಭೈರವಾರಾಧನೆ" ಡಾ.ಕೆ.ಎಂ. ಮೇತ್ರಿ, ಡಾ. ಚೆಲುವರಾಜು (ಸಂ) ಬುಡಕಟ್ಟು ಅಧ್ಯಯನ ಸಂಪುಟ (4), ಸಂಚಿಕೆ (1) ಜನವರಿ-ಡಿಸೆಂಬರ್ 2007 ಕ.ವಿ. ಹಂಪಿ 2007 ಅರ್ಧವಾರ್ಷಿಕ ಸಂಚಿಕೆಯಲ್ಲಿ ಮರಾಟಿ ಬುಡಕಟ್ಟು ಸಮುದಾಯದವರು ಆರಾಧಿಸುತ್ತಿರುವ ಭೈರವ ದೈವದ ಬಗ್ಗೆ ಪರಿಚಯಿಸುತ್ತಾರೆ. **ಡಾ.** ಅಲ್ಲದೆ ಅವರ ಮತ್ತೊಂದು ಲೇಖನ "ಕಣ್ಮರೆಯಾದ ಜನಪದ ಕುಣಿತ" – "ಬಾಲೆಸಾಂತು" ಮರಾಟಿ ಬುಡಕಟ್ಟು ಸಮುದಾಯವಾಗಿರುವ ಮಾರಾಟಿ ನಾಯ್ಕರಲ್ಲಿ ಪ್ರಚಲಿತದಲ್ಲಿದ್ದ 'ಬಾಲೆಸಾಂತು' ಕುಣಿತದ ವಿವರಣೆ ಹಾಗೂ ಇಂದು ಭಾಗಶಃ ಕಣ್ಮರೆಯಾಗಿರುವುದ್ದನ್ನು ವಿಶ್ಲೇಷಿಸಿದ್ದಾರೆ.

ಡಾ.ಎಂ.ಎಂ. ಕಲ್ಬುರ್ಗಿಯವರು ಸಂಪಾದಿತ ಕರ್ನಾಟಕದ ಕೈಫಿಯತ್ತುಗಳು ಎಂಬ ಕೃತಿಯಲ್ಲಿ ಮರಾಟಿ ಸಮುದಾಯದವರನ್ನು ಕರ್ನಾಟಕದಲ್ಲಿ ಇವರಿಗೆ "ಆರೇರು" ಎಂಬುದಾಗಿ ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ 'ಮರಾಠರು' ಎಂದು ಕರೆಯುತ್ತಾರೆ. ಇವರ ಸಮುದಾಯದಲ್ಲಿರುವ ಉಪನಾಮಗಳ ಹೆಸರು ಹಾಗೂ ಆ ಸಮುದಾಯದವರು ಯಾವ ಯಾವ ದೇವರುಗಳಿಗೆ ನಡೆದುಕೊಳ್ಳುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ.

**ಶ್ರೀ ಕೈತಂಜೆ ನರಸಿಹಭಟ್ಟ 'ಗೊಂದಲ ಪೂಜೆ' ಸುದರ್ಶನ (ಸಂ) ವಿಜಯ ಕಾಲೇಜ್, ಮುಲ್ಕಿ** 1987 ಮರಾಟಿ ನಾಯ್ಕ ಸಮುದಾಯವು ಕಾಳಭೈರವ ಹಾಗೂ ದೇವಿಯ ಉಪಾಸಕರು. ಮರಾಟಿಗಳು ಮಹಾರಾಷ್ಟದಿಂದ ವಲಸೆ ಬರುವಾಗ ತಮ್ಮೊಂದಿಗೆ ತಾವು ಆರಾಧಿಸುವ ದೇವರನ್ನು ಈ ಪ್ರದೇಶಕ್ಕೆ ತಂದಿರುವುದ್ದಾಗಿ ತಿಳಿಸಿರುತ್ತಾರೆ. ಅಲ್ಲದೆ ಗೊಂದಲ ಪೂಜೆಯ ಸುದೀರ್ಘ ವಿವರಣೆಯನ್ನು ನೀಡಿರುತ್ತಾರೆ.

**ಡಾ. ಹಿ.ಜಿ. ಬೋರಲಿಂಗಯ್ಯ ಮತ್ತು ಡಾ.ಎ.ಎಸ್. ಪ್ರಭಾಕರ** (ಸಂ) ಕರ್ನಾಟಕ ಬುಡಕಟ್ಟು ಸಚಿತ್ರಕೋಶ, (2015). ಕರ್ನಾಟಕದ ಅನುಸೂಚಿತ ಬುಡಕಟ್ಟು, ಬುಡಕಟ್ಟುಗಳು ಮತ್ತು ಅಲೆಮಾರಿ ಬುಡಕಟ್ಟುಗಳು ಒಟ್ಟು 33 ಬುಡಕಟ್ಟು ಸಮುದಾಯಗಳ ಆಧುನಿಕ ಸ್ಥಿತ್ಯಂತರಗಳನ್ನು ಅರ್ಥಪೂರ್ಣವಾಗಿ, ಹಲವಾರು ವರ್ಷಗಳ ಸುಧೀರ್ಘ ಕ್ಷೇತ್ರಕಾರ್ಯದ ಮೂಲಕ ದಾಖಲಿಸಿದ್ದಾರೆ. ಮರಾಟಿ ಸಮುದಾಯಗಳಾಗಿರುವ ಮರಾಟಿ ನಾಯ್ಕರು, ಮರಾಟಿ, ಕುಮರಿ ಮರಾಟಿ, ಮರಾಠಿ ಭಾಷಿಕ ಪ್ರದೇಶ ಗಡಿಭಾಗದಿಂದ ವಲಸೆ ಬಂದವರಾಗಿರುತ್ತಾರೆ ಎಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲದೆ ಇವರು ಆರಾಧಿಸುತ್ತಿರುವ ಮಹಾಮ್ಮಾಯಿಯ ಗೊಂದಲಪೂಜೆ, ಭೈರಾವರಾಧನೆ ವಿವರಣೆ ಕೂಡ ಇರುತ್ತದೆ.

**ರಾಧಾಮಣಿ ಟಿ.ಆರ್.ಯವರ** ಲೇಖನವು "Indians Streams Research Journal" vol. 4 issue 8 Sept. 2014 (ISBN 2230-7850) (www.issi.net) ಪ್ರಕಟಗೊಂಡಿರುವ ಲೇಖನದಲ್ಲಿ ಮರಾಟಿ ಸಮುದಾಯವು ತನ್ನ ಭಾಷೆ, ಧಾರ್ಮಿಕ ಆಚರಣೆಗಳನ್ನು ಭಿನ್ನವಾಗಿ ಹೊಂದಿದ್ದು, ಪ್ರತ್ಯೇಕವಾದ ಅಸ್ತಿತ್ವವನ್ನು ಹೊಂದಿರುತ್ತದೆ. ಅಲ್ಲದೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂಬುದಾಗಿ ತಿಳಿಸಿರುವರು.

**ಲೂಯಿಜ್ ಎ.ಎ.ಡಿ.** ಅವರು ಬರೆದ "ಟ್ರೈಬ್ಸ್ ಆಫ್ ಮೈಸೂರು" ಎಂಬ ಕೃತಿಯಲ್ಲಿ ಮರಾಟಿ ಬುಡಕಟ್ಟಿನ ಬೆಡಗುಗಳಾದ ಭೋಂಸ್ಲಾ ಅಥವಾ ಬೊಂಸ್ಲೆ, ಮರಾಟಿ ಭಾಷೆ, ದೈವಾಚರಣೆಗಳನ್ನು ದಾಖಲಿಸಿರುವರು. **ಡಾ.ಕೆ.ಎಂ. ಮೇತ್ರಿ,** ಪ್ರಾಧ್ಯಾಪಕರು ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರು ಮರಾಟಿಯವರ ಸಂಘ, ಕವತ್ತಾರು – ಮುಲ್ಕಿ ಸಂಘದ ಅಧ್ಯಕ್ಷರ ವಿನಂತಿ ಮೇರೆಗೆ ಮರಾಟಿ ಬುಡಕಟ್ಟಿನ ಕುರಿತು ವರದಿ ನೀಡಿರುತ್ತಾರೆ. ಸದರಿ ವರದಿಯಲ್ಲಿ ಡಾ. ಮೇತ್ರಿಯವರು ಮುಲ್ಕಿ ಪಿರ್ಕ ಕವತ್ತಾರು, ಏಳತ್ತೂರು, ಕರ್ನಿರೆ, ತಾಳಿಪ್ಪಾಡಿ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಲಭ್ಯವಿರುವ ಮಾಹಿತಿಯ ಕ್ರೋಢಿಕರಿಸಿ ಮರಾಟಿಯವರ ಕುಟುಂಬ, ವಿವಾಹ, ಧಾರ್ಮಿಕ ಸಂಸ್ಥೆಗಳ ವಿವರಗಳನ್ನು ನೀಡಿರುತ್ತಾರೆ.

**ರಸಲ್ ಆರ್.ವಿ.** ಅವರ "The Tribes and Caste of the Central Provinces of India" Vol. IV Cosmo Publication, Delhi 1975 ಎಂಬ ಕೃತಿಯಲ್ಲಿ ಮರಾಟಿಗರು ದಕ್ಷಿಣ ಭಾರತದ ಸೈನಿಕ ವರ್ಗಕ್ಕೆ ಸೇರಿದ ಜನಸಮುದಾಯದವರು. ಮರಾಠಿ ಸಮುದಾಯವರ ಮೂಲ, ವಿಕಾಸ, ಪ್ರಸರಣ, ಅವರ ಬಳಿ ಅಥವಾ ಬೆಡಗು ಪದ್ಧತಿ, ಆಚರಣೆ ಮುಂತಾದ ಅಂಶಗಳ ಮಾಹಿತಿಯನ್ನು ಒದಗಿಸಿರುತ್ತಾರೆ.

**ಪ್ರೊ.ಕೆ.ಎಂ. ಮೇತ್ರಿ: "ಸೂಕ್ಷ್ಮ ಆದಿವಾಸಿಗಳು",** ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ (ರಿ.) 2017 ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ತು, ವಿಶ್ವ

ಆದಿವಾಸಿ ದಿನಾಚರಣೆಯ ಸಂದರ್ಭದಲ್ಲಿ ಈ ಕೃತಿಯು ಲೋಕಾರ್ಪಣೆಗೊಂಡಿದೆ. ಈ ಕೃತಿಯು ಮುಖ್ಯವಾಗಿ ಸೂಕ್ಷ್ಮ ಆದಿವಾಸಿಗಳಾದ ಡುಂಗ್ರಿಗರಾಸಿಯ, ಚೆಂಚು, ಗೊಂಡ, ಗೌಡಲ, ಹಕ್ಕಿಪಿಕ್ಕಿ, ಹಸಲರು, ಇರುಳಿಗ, ಕಾಡುಕುರುಬ, ಮಲೆಕುಡಿಯ, ಮೇದರು, ಪಣಿಯನ್, ಯರವ, ಸೋಲಿಗರು ಮುಂತಾದ ಬುಡಕಟ್ಟು ಸಮುದಾಯಗಳ, ಪ್ರಾದೇಶಿಕ ಮಿತಿಯ ಬುಡಕಟ್ಟುಗಳಾದ ಕಮ್ಮಾರ, ಕಣಿಯನ್, ಕುರುಬ, **ಮರಾಠಾ, ಮರಾಟಿ**, ಸಿದ್ಧಿ ಹಾಗೂ ಜೇನುಕುರುಬ ಮತ್ತು ಕೊರಗ ಆದಿಮ ಬುಡಕಟ್ಟುಗಳ ಸಮಗ್ರ ಮಾಹಿತಿಯನ್ನು ನೀಡುತ್ತದೆ. ಅಲ್ಲದೆ ಸೂಕ್ಷ್ಮ ಬುಡಕಟ್ಟು ಸಮುದಾಯದ ರಕ್ಷಣೆಗೆ ಮತ್ತು ಅಭಿವೃದ್ಧಿಗೆ ಕೈ ಜೋಡಿಸಿ ಸಹಕರಿಸುತ್ತಿರುವ ಆದಿವಾಸಿ ರಕ್ಷಣಾ ಪರಿಷತ್ತಿನ ಧ್ಯೇಯೋದ್ದೇಶಗಳ ಮಾಹಿತಿಯು ಲಭಿಸುತ್ತದೆ. ಈ ಎಲ್ಲಾ ದೃಷ್ಟಿಯಿಂದ ಅಧ್ಯಯನಕಾರರಿಗೆ, ಯೋಜನಾಕೃರ್ತರಿಗೂ ಹಾಗೂ ಸಮುದಾಯಗಳ ಸಂಘಟಕರಿಗೆ ಆಕರ ಗ್ರಂಥವಾಗಲಿರುವುದು.

**ಕಡಿಚಿಣಚಿರಿ ಖುಟಿರ ಗಿಜಟುರಿ ಏಚಿಟಿಇಚಿಡಿ** ಅವರ "The Kurmis - Kundbis of India" Pritam Prakashan, Paji Fard, margao, Gao 2006ರ ಗ್ರಂಥದಲ್ಲಿ ಕುರ್ಮಿ ಸಮುದಾಯವು ಒಂದು ಕೃಷಿ ಜೀವನ ನಡೆಸುವ ಸಮುದಾಯವಾಗಿರುತ್ತದೆ. ದೇಶಾದ್ಯಂತ ವಾಸ್ತವ್ಯವಿರುವ ಈ ಸಮುದಾಯದವರನ್ನು ಬೇರೆ ಬೇರೆ ಭಾಷೆಗಳಲ್ಲಿ ಹೇಗೆ ಕರೆಯಲಾಗುತ್ತದೆ ಎಂಬುದಾಗಿ ತಿಳಿಸಿರುತ್ತಾರೆ ಹಾಗೂ ಈ ಸಮುದಾಯದ ಆರ್ಥಿಕತೆಯ ಬಗ್ಗೆ ತಿಳಿಸಿರುವವರು. ಡಾ. ಹಿ.ಚಿ. ಬೋರಲಿಂಗಯ್ಯ 'ಗಿರಿಜನ ನಾಡಿಗೆ ಪಯಣ' (1991) ಮತ್ತು ಕುಣಬಿಯವರು (2010) ಎಂಬ ಕೃತಿಯಲ್ಲಿ 'ಮೇಘಾನೆ' ಪ್ರದೇಶದಲ್ಲಿ ವಾಸ್ತವ್ಯವಿರುವ ಕುಣಬಿಯವರ ಕುರಿತು ಪರಿಚಯಿಸಿದ್ದಾರೆ. ಪ್ರಾನ್ಸಿಸ್ ಬುಕಾನನ್ – 'Journey from Madas to coastal Karnataka' ಎಂಬ ಗ್ರಂಥದಲ್ಲಿ 'ಕುಣಬಿಗಳು ಕರ್ನಾಟಕದ ಮೂಲ ಬುಡಕಟ್ಟು' ಎಂಬುದಾಗಿ ತಿಳಿಸಿದ್ದಾರೆ. ಪ್ರಾಕೃತಿಕ ವಿಕೋಪದಿಂದಾಗಿ ಗೋವಾಕ್ಕೆ ವಲಸೆ ಹೋಗಿ ತದನಂತರ ಪೋರ್ಚುಗೀಸರ ಆಳ್ವಿಕೆ ಕಾಲದಲ್ಲಿ ಪುನಃ ಕರ್ನಾಟಕದ ಜೋಯಿಡಾ ಭಾಗಕ್ಕೆ ವಾಪಾಸಾಗಿರುವರು ಎಂಬುದಾಗಿ ತಿಳಿಸಿರುವರು. **ಪ್ರೋ ಎ.ವಿ. ನಾವಡ : 'ಕೊಂಕಣದ ಕುಡುಬಿಯವರು'** ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು 2008, ಕೃತಿಯಲ್ಲಿ ಕುಡುಬಿರು ಮೂಲತಃ ಗೋವಾ ಸರಹದ್ದಿನಿಂದ ಕರಾವಳಿ ಕರ್ನಾಟಕಕ್ಕೆ ವಲಸೆ ಬಂದು ನೆಲೆ ನಿಂತ ಜನ ಸಮುದಾಯ ಎಂಬುದಾಗಿ ತಿಳಿಸಿದ್ದಾರೆ. ಅಲ್ಲದೆ ಕುಣಬಿಯರ ಬಗ್ಗೆ ನಡೆದ ಅಧ್ಯಯನ; ಸಮುದಾಯದ ಹಿನ್ನೆಲೆಯ ಕುರಿತು ವಿಸ್ತೃತವಾಗಿ ತಿಳಿಸಿದ್ದಾರೆ.

**ಡಾ. ರಮೇಶ ಜೆ.ಕೆ. : ಮರಾಟಿ ಕುಣಬಿಗಳು,** ಚಕೋರ ಪ್ರಕಾಶನ, ತೀರ್ಥಹಳ್ಳಿ ಶಿವಮೊಗ್ಗ (2008) ಕೃತಿಯಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿ ವಾಸ್ತವ್ಯವಿರುವ ಕುಣಬಿಗಳು ಮಹಾರಾಷ್ಟ್ರದ ಸಾಂಗ್ಲಿ, ಕೊಲ್ಲಾಪುರ, ಸೊಲ್ಲಾಪುರ, ಪಂಡರಪುರ, ಸತಾರ, ನಾಗಪುರ ಹಾಗೂ ಗೋವಾ ರಾಜ್ಯದ ಬೇರೆ ಬೇರೆ ಸ್ಥಳಗಳಿಂದ ವಲಸೆ ಬಂದು ಕರ್ನಾಟಕದ ಕರಾವಳಿ ಹಾಗೂ ಪಶ್ಚಿಮಘಟ್ಟ ಪ್ರದೇಶದ ಹಳ್ಳಿಗಳಲ್ಲಿ ನೆಲೆಸಿದ್ದಾರೆ. ಅವರ ಸಾಂಸ್ಕೃತಿಕ ಆಚರಣೆಯನ್ನು ಮತ್ತು ಸಮುದಾಯದಲ್ಲಿ ಆಗಿರುವ ಬದಲಾವಣೆಯನ್ನು ತಿಳಿಸಿದ್ದಾರೆ. ಡಾ. ಸವಿತಾ ನಾಯಕ : 'ಉತ್ತರಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳಲ್ಲಿ – ಪ್ರಸಾಧನ ಕಲೆ ಎಂಬ ಮಹಾಪ್ರಬಂಧದಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿರುವ ಬುಡಕಟ್ಟುಗಳು ಮತ್ತು ಜಾತಿಗಳಾವುವು ಎಂಬ ವಿಷಯದಲ್ಲಿ ಕುಣಬಿ ಸಮುದಾಯವನ್ನು ಪರಿಚಯಿಸಿದರು. ಎ.ಎ.ಡಿ. ಲೂಯಿಸ್ ಅವರ 'ಟ್ರೈಬ್ಸ್ ಆಫ್ ಮೈಸೂರು' ಎಂಬ ಕೃತಿಯಲ್ಲಿ ಕುಣಬಿಯರ ಕುರಿತು ವಿವರಣೆ ನೀಡಿದ್ದಾರೆ. ಇವರ ಪ್ರಕಾರ ಉತ್ತರಕನ್ನಡ ಜಿಲ್ಲೆಯಲ್ಲಿ ಕುಣಬಿ ಸಮುದಾಯದವರು ವಾಸ್ತವ್ಯವಿದ್ದು, ಅವರ ಜನಸಂಖ್ಯೆಯ ವಿವರಗಳನ್ನು ನೀಡಿರುತ್ತಾರೆ. ಅವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ಇವರು ಮರಾಟಿ, ಕನ್ನಡ, ತುಳು ಭಾಷೆ ಮಾತನಾಡುತ್ತಾರೆ. ಅವರ ಆಹಾರ ಪದ್ಧತಿ, ಬೇಟೆ, ಸಾಂಸ್ಕೃತಿಕ ಅಂಶಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

**ಎಡ್ಗರ್ ಥರ್ಸ್ಟನ್ ಅವರು 'ಕಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸೌತ್ ಇಂಡಿಯ'** ಎಂಬ ಗ್ರಂಥದಲ್ಲಿ ಕುಣಬಿ ಸಮುದಾಯದವರು ಬುಡಕಟ್ಟು ಎಂಬುದಾಗಿ ಮೊತ್ತ ಮೊದಲು ಗುರುತಿಸಿದ್ದಾರೆ. ಸುಮಾರು ವರ್ಷಗಳ ಹಿಂದೆಯೇ ಕುಣಬಿ ಸಮುದಾಯದವರ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗಳನ್ನು, ಸಂಪ್ರದಾಯ ಮತ್ತು ಪದ್ಧತಿಗಳನ್ನು ವಿವರಿಸುತ್ತಾ ಸಮುದಾಯವನ್ನು ಪರಿಚಯಿಸಿದ್ದಾರೆ. ಈ ಸಮುದಾಯದ ಬಗ್ಗೆ ಸಾಂಸ್ಕೃತಿಕ ವಿವರಣೆ ನೀಡಿರುವುದರಿಂದ ಮುಂದಿನ ಸಂಶೋಧನಾತ್ಮಕ ಅಧ್ಯಯನಕ್ಕೆ ಉಪಯುಕ್ತವಾಗಿರುತ್ತದೆ. **ಆರ್.ಇ. ಎಂಥೋವೆನ್ ಅವರ 'ದಿ ಟ್ರೈಬ್ಸ್ ಅಂಡ್ ಕ್ಯಾಸ್ಟ್ ಆಫ್ ಬಾಂಬೆ'** (1975) ಎಂಬ ಗ್ರಂಥದಲ್ಲಿ ಉತ್ತರಕನ್ನಡ ಜಿಲ್ಲೆಯ ಹಲವಾರು ಸಮುದಾಯಗಳ ಬಗ್ಗೆ ಪರಿಚಯಿಸಿರುತ್ತಾರೆ. ಈ ಕೃತಿಯಲ್ಲಿ ಕುಣಬಿಯವರು ಜೀವನ ಶೈಲಿ, ಆಹಾರ ಪದ್ಧತಿ, ಬೇಟೆ, ಸಾಂಸ್ಕೃತಿಕ ಅಂಶಗಳ ಬಗ್ಗೆ ಸ್ಥೂಲವಾಗಿ ಪರಿಚಯಿಸಿದ್ದಾರೆ. ನಂಜುಂಡಯ್ಯ ಅನಂತ್ ಕೃಷ್ಣ ಅಯ್ಯರ್ ಅವರ 'ದಿ ಮೈಸೂರ್ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್' ಸಂ: 11 (1928) ಕೃತಿಯಲ್ಲಿ ಕುಣಬಿಗಳ ಒಂದು ಪಂಡಗವಾಗಿರುವ 'ಆರೆ ಕುಣಬಿ"ಗಳ (ಮರಾಟ ಕುಣಬಿ) ಸಂಕ್ಷಿಪ್ತವಾದ ವಿವರಣೆಯಿರುತ್ತದೆ. ಕುಣಬಿ ಸಮುದಾಯದ ಅಂತರಿಕ ರಚನೆ, ವಿವಾಹದ ವಿಧಿ–ನಿಷೇದಗಳು, ಬುಡಕಟ್ಟು ಒಳಾಡಳಿತ ವ್ಯವಸ್ಥೆ, ಧಾರ್ಮಿಕ ಆಚರಣೆ, ಕುಮೇರಿ ಬೇಸಾಯ ಮುಂತಾದ ವಿಷಯಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ.

ಎಂ.ಎ. ಶೆರ್ರಿಂಗ್‌ರವರ : "ಹಿಂದು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್" ಸಂ: 11 1984ರಲ್ಲಿ ಗುಜರಾತ್ ರಾಜ್ಯದ ಸೂರತ್ ಜಿಲ್ಲೆಯ ಜುನಾಗಡ್, ಬಂಟ್ವಾ ತಾಲೂಕುಗಳಲ್ಲಿ, ಗೋವೆಲ್‌ವಾರ ಜಿಲ್ಲೆ ಮತ್ತು ವಾಂಡೆ ಸುರವೆಯಂ ಉಪವಿಭಾಗದ ಕೆಲವು ಪ್ರದೇಶಗಳಲ್ಲಿ ಕುಣಬಿ ಜಾತಿಯ ಸಮುದಾಯದವರು ವಾಸಿಸುವರು ಎಂಬುದಾಗಿ ತಿಳಿಸಿರುವರು. ಡಾ. ಎಂ. ಶ್ಯಾಮ್ ಭಟ್ ಎನ್. ಅವರು 'ಸೌತ್ ಕೆನರಾ' ಮಿಥೆಲ್ ಪಬ್ಲಿಕೇಷನ್ ನ್ಯೂಡೆಲ್ಲಿ 1995. 'ಸೋಶಿಯಲ್ ಆ್ಯಂಡ್ ಎಕೋನಾಮಿಕ್ ಸ್ಟ್ಯಾಟಸ್ ಆಫ್ ಕುಡುಬೀಸ್' ಎಂಬ ವಿಷಯದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕುಡುಬಿಯವರು ಕೃಷಿ ಕಾರ್ಯ ಮಾಡುವವರು ಎಂದು ಪರಿಚಯಿಸಿದ್ದಾರೆ. ಪ್ರೊ. ಎಚ್. ಜೆ. ಲಕ್ಕಪ್ಪ ಗೌಡ ಅವರ "ಕರ್ನಾಟಕ ಬುಡಕಟ್ಟುಗಳು" ಸಂಪುಟ: 1 ಮತ್ತು ಸಂ: 2ರಲ್ಲಿ (1998) ಉತ್ತರಕನ್ನಡ ಜಿಲ್ಲೆಯ ಹಲವಾರು ಆದಿವಾಸಿ ಸಮುದಾಯಗಳ ಕುರಿತು ಸಂಕ್ಷಿಪ್ತವಾದ ಬರಹಗಳಿವೆ. ಇದರಲ್ಲಿ ಡಾ. ಅಭಯ್ ಕುಮಾರ್ ಕೌಕಡಿ ಅವರ 'ಕುಡುಬಿಯವರು' ಎಂಬ ಲೇಖನದಲ್ಲಿ ಈ ಸಮುದಾಯದ ಅಧ್ಯಯನದ ಉದ್ದೇಶ ಹಾಗೂ ಕುಡುಬಿ ಸಮುದಾಯವೊಂದು ಬುಡಕಟ್ಟು ಎಂಬುದಾಗಿ ಗುರುತಿಸಿದ್ದಾರೆ. ಗೋವಾ ಕುಡುಬಿಯರ ಮೂಲನೆಲೆ, ಭಾಷೆ, ಆಹಾರ ಪದ್ಧತಿ, ಬೇಟೆ ಪದ್ಧತಿ, ಧಾರ್ಮಿಕ ನಂಬಿಕೆ ಮತ್ತು ಆರಾಧನೆಗಳು, ನ್ಯಾಯ ಪದ್ಧತಿ, ಸಾಂಸ್ಕೃತಿಯ ಕಲೆಗಳ ವಿವರಗಳು ನೀಡಿರುತ್ತಾರೆ.

**ಕೆ.ಎಸ್. ಸಿಂಗ್ : ಪೀಪಲ್ ಆಫ್ ಇಂಡಿಯ – ಕರ್ನಾಟಕ ಸಂ: 26 ಪಾರ್ಟ್: 2 2003** ಕೃತಿಯಲ್ಲಿ ಕುಣಬಿಯವರು ಮೂಲತಃ ಗೋವಾ ರಾಜ್ಯದವರಾಗಿರುತ್ತಾರೆ. 16ನೇ ಶತಮಾನದಲ್ಲಿ ಕರ್ನಾಟಕದ ಕರಾವಳಿ ಪ್ರದೇಶಕ್ಕೆ ಹಾಗೂ ಕೇರಳ ರಾಜ್ಯಕ್ಕೆ ವಲಸೆ ಬಂದಿರುವ ಸಮುದಾಯವಾಗಿದೆ. ಈ ಕೃತಿಯಲ್ಲಿ ಕುಣಬಿ ಸಮುದಾಯದ ವಿವಾಹ ಪದ್ಧತಿ, ವೇಷ ಭೂಷಣಗಳ ಬಗ್ಗೆ, ಕೃಷಿ, ಪಶುಸಂಗೋಪನೆ ಇತ್ಯಾದಿ ವಿಚಾರಗಳ ಬಗ್ಗೆ ಮಾಹಿತಿ ನೀಡಿರುತ್ತಾರೆ. ಭಂಡಾರ್‌ಕಾರ್ಸ್ ಕಾಲೇಜು ಕುಂದಾಪುರ ಇಲ್ಲಿಯ ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ 1998ರಲ್ಲಿ ಶ್ರೀಮತಿ ಗಾಯತ್ರಿ ನಾವಡ ಇವರು "ತವರಿನ ಕಟ್ಟು ಕಡಿವ ಕುಡುಬಿ ವಿವಾಹ" ಎಂಬ ಲೇಖನದಲ್ಲಿ ಕುಡುಬಿ ಸಮುದಾಯದ ವಿವಾಹ ಪದ್ಧತಿಯ ಕುರಿತು ವಿಶ್ಲೇಷಿಸಿರುತ್ತಾರೆ. ಡಾ. ವೈ. ರವೀಂದ್ರನಾಥ ರಾವ್ ಅವರ "ಟ್ರೈಬಲ್ ಟ್ರೆಡಿಷನ್ ಆ್ಯಂಡ್ ಚೇಂಜ್, ಪಿ ಸ್ಟಡಿ ಆಫ್ ಕುಡುಬೀಸ್ ಆಫ್ ಸೌತ್ ಇಂಡಿಯ" ಎಂಬ ಕೃತಿಯಲ್ಲಿ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕುಡುಬಿ ಸಮುದಾಯಗಳ ವಾಸ್ತವ್ಯದ ನೆಲೆಗಳು, ವೈವಾಹಿಕ ಕೌಟುಂಬಿಕ ವ್ಯವಸ್ಥೆ, ಬಂಧುತ್ವದ ಪದ್ಧತಿ, ಒಳಪಂಗಡ, ನಂಬಿಕೆ ಮತ್ತು ಆರಾಧನೆಗಳು ಮುಂತಾದ ವಿಷಯಗಳ ಬಗ್ಗೆ ವಿಶ್ಲೇಷಣಾತ್ಮಕ ವಿಚಾರಗಳಿವೆ.

**ಡಾ. ಎ.ಎಸ್. ಪ್ರಭಾಕರ** ಅವರು ರಚಿಸಿರುವ **"ಆದಿವಾಸಿ ಅಖ್ಯಾನ"** ಎಂಬ ಕೃತಿಯಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಬುಡಕಟ್ಟುಗಳ ಬಗ್ಗೆ ವಿಸ್ತೃತವಾದ ಮಾಹಿತಿಯನ್ನು ಒದಗಿಸಿರುವರು.

- ಆ ಕೃತಿಯಲ್ಲಿ ಶ್ರೀಮತಿ ವಿಜಯಲಕ್ಷ್ಮೀ ಆರ್. ಅವರ "ಕರ್ನಾಟಕ ಬುಡಕಟ್ಟು ನೆಲೆಗಳು" ಎಂಬ ಲೇಖನದಲ್ಲಿ ಕುಣಬಿಯವರ ನೆಲೆಗಳು, ಭಾಷೆ, ಒಳಪಂಗಡ, ವೃತ್ತಿ, ವೇಷಭೂಷಣ, ಆಚಾರ – ವಿಚಾರ, ಮುಂತಾದ ಜೀವನ ಪದ್ಧತಿಗಳ ವಿವರಣೆ ಇರುತ್ತದೆ. ಅಲ್ಲದೆ ಈ ಸಮುದಾಯವೊಂದು ಬುಡಕಟ್ಟು ಸಮುದಾಯ ಎಂಬುದಾಗಿ ವಿಶ್ಲೇಷಿಸಿರುವರು.
- ಅಲ್ಲದೆ ಅದೇ ಕೃತಿಯಲ್ಲಿ ಬಿ.ಪಿ. ಮಹೇಂದ್ರ ಕುಮಾರ್ ಅವರ 'ಬುಡಕಟ್ಟು ಜನಾಂಗದಲ್ಲಿ ಸೀಮೆಯ ಪರಿಕಲ್ಪನೆ' ಎಂಬ ಲೇಖನದಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿ ವಾಸ್ತವ್ಯವಿರುವ ಕುಣಬಿ ಜನಾಂಗದ ಸಾಮಾಜಿಕ ಬದುಕಿನ ಸಮಗ್ರ ವಿವರಣೆ ಇರುತ್ತದೆ.

**ಎಲ್.ಜಿ. ಹಾವನೂರ : ಅವರು ತಮ್ಮ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ವರದಿ** (ಸಂ: 1) ಮತ್ತು (2) 1973 ಕುಡುಬಿಯವರನ್ನು ಜಾತಿ ಸಮಾಜಕ್ಕೆ ಸೇರಿದವರೆಂದು ತಿಳಿದು ಸದರಿ ವರದಿಯು ಇವರನ್ನು ಹಿಂದುಳಿದ ಜಾತಿಯ ಪಟ್ಟಿಯಲ್ಲಿ ಸೇರಿಸಿದೆ. ಆದರೆ 1963ನೇ ಇಸವಿ ತನಕ ಇವರನ್ನು ಬುಡಕಟ್ಟು ಜನರೆಂದು ಸರಕಾರ ಪರಿಗಣಿಸಿತ್ತು. **ಬಾಂಬೆ ಗೆಜೆಟೀಯರ್ –** 'ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು' ಭಾಗ : 13 ಎಂಬ ಗ್ರಂಥದಲ್ಲಿ ಕುಣುಬಿ ಸಮುದಾಯ ನೆಲೆಸಿರುವ ತಾಲೂಕು ಅವರ ಜನಸಂಖ್ಯೆಗಳ ಬಗ್ಗೆ ಕುರಿತು ವಿವರಿಸಿರುತ್ತಾರೆ. (1983–ಕಕ : 438–441) **ಕರ್ನಾಟಕ** ಸ್ಟೇಟ್ ಗೆಜೇಟಿಯರ್ ಉತ್ತರಕನ್ನಡ ಜಿಲ್ಲೆ – 1985 ಎಂಬ ಕೃತಿಯಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿನ ಸಮುದಾಯಗಳ ಕಿರುಪರಿಚಯ ನೀಡುವಾಗ ಕುಣುಬಿ ಸಮುದಾಯದ ಕುರಿತು ಸ್ಥೂಲವಾಗಿ ಪರಿಚಯಿಸಿದ್ದಾರೆ. ಕರ್ನಾಟಕ ರಾಜ್ಯ ಪತ್ರ ಏಪ್ರಿಲ್ 11 2002ರ ಪ್ರಕಾರ ಕುಣುಬಿಗಳನ್ನು ಪ್ರವರ್ಗ – 1ರಲ್ಲಿ ಸೇರಿಸಲ್ಪಟ್ಟಿದೆ. (ಸರಕಾರಿ ಆದೇಶ ಸಂಖ್ಯೆ – ಸಕಇ/225 ಬಿಸಿಎ, 2000 ಬೆಂಗಳೂರು – 30 ಮಾರ್ಚ್ 2002) ಗವರ್ನಮೆಂಟ್ ಆಫ್ ಗೋವಾ, ಏಪ್ರಿಲ್ 22 2003ರ ಆದೇಶದಲ್ಲಿ ಗೋವಾ ಸರಕಾರ ಆ ರಾಜ್ಯದಲ್ಲಿ ವಾಸಿಸುವ ಕುಣುಬಿ ಸಮುದಾಯವನ್ನು ಹಾಗೂ ವೇಳಪ ಮತ್ತು ಗಾವಡ ಮೂರು ಸಮುದಾಯಗಳನ್ನು ಷೆಡ್ಯೂಲ್ಡ್ ಟ್ರೈಬ್ಸ್ (ಪರಿಶಿಷ್ಟ ಜಾತಿ) ಎಂಬುದಾಗಿ ಘೋಷಿಸಿರುತ್ತದೆ. (ಆಧಾರ : ಡೈರೆಕ್ಟರ್ ಆಫ್ ಸೋಶಿಯಲ್ ವೆಲ್‌ಫೇರ್, ಗವರ್ನಮೆಂಟ್ ಆಫ್ ಗೋವಾ ಏಪ್ರಿಲ್ 22, 2003)

**ಡಾ. ಆರ್. ಇಂದಿರಾ – 2001, ಅರಣ್ಯಾಭಿವೃದ್ಧಿ ಮತ್ತು ಮಹಿಳಾ ಸಶಕ್ತೀಕರಣ,** 'ಅರಣ್ಯಾಭಿವೃದ್ಧಿ ಯೋಜನೆಗಳಲ್ಲಿ ಮೂಲ ನಿವಾಸಿ ಮಹಿಳೆಯ ಪಾತ್ರ' ಎಂಬ ಲೇಖನದಲ್ಲಿ ಜೋಯಿಡ ತಾಲೂಕಿನಲ್ಲಿ ಕುಣುಬಿ ಸಮುದಾಯದವರು ವಾಸ್ತವ್ಯವಿರುವ ಗ್ರಾಮಗಳ ಬಗ್ಗೆ ಮಾಹಿತಿಯನ್ನು ವರದಿ ರೂಪದಲ್ಲಿ ನೀಡಿರುತ್ತಾರೆ. ಡಾ. ಡಿ.ಬಿ. ನಾಯಕ – 'ಗಿರಿಜನ ಸಿರಿ' – 2003. ಪ್ರೋ. ಪಿ.ಕೆ. ಖಂಡೋಬಾ ಅಭಿನಂದನ ಸಂಪುಟದಲ್ಲಿ ಎ.ಸಿ. ಲಲಿತ ಅವರ 'ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ' ಎಂಬ ಲೇಖನದಲ್ಲಿ ಕುಣುಬಿ ಸಮುದಾಯದ ಜೀವನ ವಿಧಾನಗಳ ಸ್ಥೂಲವಾದ ವಿವರಣೆಯಿದೆ. ಪ್ರೋ. ಜಿ. ವೆಂಕಟ ಸುಬ್ಬಯ್ಯ – ಕನ್ನಡ ನಿಘಂಟು ಸಂ: 2, 1976ರ ಕೃತಿಯಲ್ಲಿ ಕುಣುಬಿ ಸಮುದಾಯದವರು ಒಕ್ಕಲು ತನ ಮಾಡುತ್ತಿರುವ ಜಾತಿಗಳಲ್ಲಿ ಒಂದಾಗಿರುತ್ತದೆ. ಅಲ್ಲದೆ ಕುಣುಬಿ ಸಮುದಾಯದಲ್ಲಿ ಕುಳನಾಡ, ಮರಾಠೀ, ಕೊಂಕಣಿ ಕುಣುಬಿ ಎಂಬ ಪ್ರಭೇದಗಳಿವೆ ಎಂಬುದಾಗಿ ತಿಳಿಸಿರುತ್ತಾರೆ. ಡಿ. ವಿ. ಪ್ರಕಾಶ ಅವರ ಕುಡುಬಿ ಜಾನಪದ ಸಂಗ್ರಹ ಎಂಬ ಕೃತಿಯಲ್ಲಿ ಕುಡುಬಿಯವರ ಸಾಂಸ್ಕೃತಿಕ, ಜಾನಪದ ಕುಣಿತಗಳ ವಿವರಣೆ ಇದೆ. ಅಲ್ಲದೆ ಅವರ ವಾಸ್ತವ್ಯವಿರುವ ಮನೆಯ ಬಗ್ಗೆ, ಜೀವನ ವಿಧಾನಗಳ ಬಗ್ಗೆ ಮಾಹಿತಿ ಒದಗಿಸಿದ್ದಾರೆ. ಈ ಕೃತಿಯು ಕೊಂಕಣಿ ಭಾಷೆ ಇರುವುದು.

ಹೀಗೆ ಸ್ವಾತಂತ್ರ ಪೂರ್ವ ಮತ್ತು ನಂತರದ ಕಾಲ ಘಟ್ಟದಲ್ಲಿ ಮರಾಟಿ ಸಮುದಾಯಗಳನ್ನು ಸಮಾಜದ ಒಳಗಿನವರಿಂದಲೂ ಹಾಗೂ ಹೊರಗಿನವರಿಂದಲೂ ಅಧ್ಯಯನ ಒಳಪಟ್ಟಿದೆ.

ಮೇಲಿನ ಎಲ್ಲಾ ಲೇಖನಗಳು, ಕೃತಿಗಳು, ಸಂಶೋಧನಾ ಗ್ರಂಥಗಳು, ಮರಾಟಿ ಸಮುದಾಯದ ಕುರಿತು ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತವೆ. ಈ ಎಲ್ಲಾ ಕೃತಿಗಳು ಹಾಗೂ ಲೇಖನಗಳಿಂದ ಮರಾಟಿ ಸಂಸ್ಕೃತಿಗೆ ಹೆಚ್ಚು ಮಹತ್ವಕೊಟ್ಟಿರುವುದನ್ನು ಗಮನಿಸಬಹುದು.

**ಗಿಖಖಖ. ಆಧಾರ ಗ್ರಂಥಗಳು**

**C) English**


1. Risely H.: Censes of Indian report, 1901 vol. 1
2. Baines J.A.: Censes Indian Report 1891 vol. 1 Pt 1
3. Hutton J.H.: Censes Indian Report vol 1 Pt, 1931
4. Subramanya G.: Social Problem, Sapna Book House Private Limited 2014
5. Ghurge G.S.: The Aboriginals So-called and their future. 1943
6. Elwin V.: The Baigas 1939
7. Das R.K. and Das S.R.: "India's Submerged Humanity" Modern Review 1955
8. Subramanya G.: Social Problems, Sapna Books House Private Limited Bangalore,
9. Nirmal kumar Bose: Tribal life the India Nalimal book trust, New Delhi, 1971.
10. Dhirendranath Majundar: The affirs of a tribe a study is Tribal Dynamies – Universal publishers, Luncknow, 1950.
11. Russel R.V.: The tribes and caste of the central promise of India Vol IV cosmo publications, New Delhi, 1975.
12. Luiz A.A.D.: "Tribe of Mysore" Vishwa and Co. Bangalore, 1963.
13. Franies Buchanam: Journey Through Mysore, Canara and Malabar, 1807.
14. Thuston Edger: Caste and Tribe of Southern India vol VI, Madras, 1909.
15. Pratap Singh Velip Kankar: The Kurmis and kunbis of India, Pritham Prakashan, Marga Goa, 2006.


**ಆ) ಕನ್ನಡ ಕೃತಿಗಳು:**


1. ಡಾ. ಹಿ.ಚಿ. ಬೋರಲಿಂಗಯ್ಯ: ಗಿರಿಜನ ನಾಡಿಗೆ ಪಯಣ, 1991.
2. ಡಾ. ಹಿ.ಚಿ. ಬೋರಲಿಂಗಯ್ಯ: ಕುಣುಬಿಯರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
3. ಡಾ.ಕೆ. ಸುಂದರ ನಾಯಕ್: ಕರಾವಳಿ ಕರ್ನಾಟಕದ ಮರಾಟಿ ಜನಾಂಗ ಪರಂಪರೆ ಮತ್ತು ಆಧುನಿಕತೆ, ದೀಪಪ್ರಿಯ, ಪ್ರಕಾಶನ, ಬೆಂಗಳೂರು, 2008.
4. ಡಾ.ಹಿ.ಚಿ. ಬೋರಲಿಂಗಯ್ಯ ಮತ್ತು ಡಾ.ಎ.ಎಸ್. ಪ್ರಭಾಕರ (ಸಂ) ಕರ್ನಾಟಕ ಬುಡಕಟ್ಟು ಸಚಿತ್ರ ಕೋಶ ಪ್ರಸಾರಾಂಗ, ಕ.ವಿ.ವಿ. ಹಂಪಿ, 2015
5. ಡಾ.ಕೆ.ಎಂ. ಮೇತ್ರಿ: 'ಸೂಕ್ಷ್ಮ ಆದಿವಾಸಿಗಳು' ಕರ್ನಾಟಕ ಆದಿವಾಸಿ ರಕ್ಷಣ ಪರಿಷತ್ (ರಿ) ಬೆಂಗಳೂರು, 2017.
6. ಪ್ರೊ. ಎ.ವಿ. ನಾವಡ: 'ಕೊಂಕಣದ ಕುಡುಬಿಯವರು', ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು, 2008.
7. ಡಾ. ರಮೇಶ ಜೆ.ಕೆ.: ಮರಾಟಿ ಕುಣುಬಿಗಳು, ಚಕೋರ ಪ್ರಕಾಶನ, ತೀರ್ಥಹಳ್ಳಿ ಶಿವಮೊಗ್ಗ, 2008.
8. ಡಾ. ಸವಿತಾ ನಾಯಕ: 'ಉತ್ತರ ಕನ್ನಡ ಜಿಲ್ಲೆಯ ಕೆಲವು ಬುಡಕಟ್ಟುಗಳಲ್ಲಿ ಪ್ರಸಾದನ ಕಲೆ, (ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ)
9. ಪ್ರೊ. ಎಚ್. ಲಕ್ಕಪ್ಪ ಗೌಡ: ಕರ್ನಾಟಕದ ಬುಡಕಟ್ಟುಗಳು, ಸಂಪುಟ (1) ಮತ್ತು (2), 1998.
10. ಡಾ. ಇಂದಿರಾ ಅರಣ್ಯಾಭಿವೃದ್ಧಿ ಮತ್ತು ಮಹಿಳಾ ಸಶಕ್ತೀಕರಣ, 2001.
11. ಡಾ.ಡಿ.ಬಿ. ನಾಯಕ್: 'ಗಿರಿಜನ ಸಿರಿ', 2003.
12. ಡಿ.ವಿ. ಪ್ರಕಾಶ : ಕುಡುಬಿ ಜಾನಪದ ಸಂಗ್ರಹ


**ಇ) ಲೇಖನಗಳು:**


1. ಡಾ. ಕೆ. ಸುಂದರ ನಾಯ್ಕ: ಮರಾಟಿ ಜನಾಂಗದ ಶೈಕ್ಷಣಿಕ ಸಾಂಸ್ಕೃತಿಕ, ಭಾಷಿಕ ಮತ್ತು ತಾತ್ವಿಕ ಪರಿವರ್ತನೆಗಳು, ಡಾ. ಮಂಜುನಾಥ ಬೇವಿನಕಟ್ಟೆ (ಸಂ) ಜಾನಪದ ಕರ್ನಾಟಕ ಸಂಪುಟ (1) ಸಂಚಿಕೆ (1) ಜುಲೈ – ಡಿಸೆಂಬರ್ ಪ್ರಸಾರಾಂಗ, ಕ.ವಿ.ವಿ. ಹಂಪಿ, 2009
2. ಡಾ. ಎಸ್. ಮೋಹನ್ : 'ಕಣ್ಮರೆಯಾದ ಜನಪದ ಕುಣಿತ : ಬಾಲೆಸಾಂತು' ಡಾ. ಹೆಬ್ಬಾರ ಕೆ. ನಾಗೇಶ್ (ಸಂ) ಜಾನಪದ ಕರ್ನಾಟಕ ಸಂಪುಟ (5) ಸಂಚಿಕೆ (2) ಪ್ರಸಾರಾಂಗ, ಕ.ವಿ.ವಿ. ಹಂಪಿ, 2006

3. ಡಾ.ಎಸ್. ಮೋಹನ್ : 'ಭೈರವ ಆರಾಧನೆ' – ಡಾ.ಸ.ಚಿ. ರಮೇಶ (ಸಂ) ಜಾನಪದ ಕರ್ನಾಟಕ ಸಂಚಿಕೆ (2) ಪ್ರಸಾರಾಂಗ, ಕ.ವಿ.ವಿ. ಹಂಪಿ
4. ಡಾ.ಎಸ್. ಮೋಹನ್ : 'ಮರಾಟಿ ಬುಡಕಟ್ಟು ಬೈರಾವರಾಧನೆ', ಡಾ.ಕೆ.ಎಂ. ಮೇತ್ರಿ, ಡಾ. ಚೆಲುವರಾಜು (ಸಂ) ಬುಡಕಟ್ಟು ಅಧ್ಯಯನ ಸಂಪುಟ (4) ಸಂಚಿಕೆ (1) ಜನವರಿ – ಡಿಸೆಂಬರ್, ಪ್ರಸಾರಾಂಗ ಕ.ವಿ.ವಿ. 2007
5. ಕೈಂತಜೆ ನರಸಿಂಹ ಭಟ್ಟ : 'ಗೊಂದಲ ಪೂಜೆ' ಸುದರ್ಶನ (ಸಂ) ವಿಜಯ ಕಾಲೇಜು ಮುಲ್ಕಿ, 1987
6. ಡಾ.ಹಿ.ಟಿ. ಬೋರಲಿಂಗಯ್ಯ ಮತ್ತು ಡಾ.ಎ.ಎಸ್. ಪ್ರಭಾಕರ (ಸಂ)
7. ಶ್ರೀಮತಿ ಗಾಯತ್ರಿ ನಾವಡ : 'ತವರಿನ ಕಟ್ಟು ಕಡಿವ ಕುಡುಬಿ ವಿವಾಹ' ದರ್ಶನ – ಬೆಳ್ಳಿ ಹಬ್ಬದ ಸ್ಮರಣ ಸಂಚಿಕೆ, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ, 1998
8. ಶ್ರೀಮತಿ ವಿಜಯಲಕ್ಷ್ಮೀ ಆರ್. : 'ಕರ್ನಾಟಕ ಬುಡಕಟ್ಟು ನೆಲೆಗಳು' ಡಾ.ಎಸ್. ಪ್ರಭಾಕರ ಆದಿವಾಸಿ ಅಖ್ಯಾನ
9. ಬಿ.ಪಿ. ಮಹೇಂದ್ರ ಕುಮಾರ್ : ಬುಡಕಟ್ಟು ಜನಾಂಗದಲ್ಲಿ ಸೀಮೆಯ ಪರಿಕಲ್ಪನೆ ಡಾ.ಎ.ಎಸ್. ಪ್ರಭಾಕರ ಆದಿವಾಸಿ ಅಖ್ಯಾನ